ಅಪರಂಜಿ

ನವೆಂಬರ್ 2006

ತಿಳಿನಗೆಯ ಕಾರಂಜಿ



ಪ್ರಕಾಶ್
ಶಿವಕುಮಾರ್
ಬಾಗೂರು ಚಂದ್ರು
ಹಾ.ರಾ.
ಗೋಪಾಲಿ
ಸು. ವಿಜಯಲಕ್ಷ್ಮಿ
ಲೋಕನಾಥ ದೀಕ್ಷಿತ್
ಶರಣೇಗೌಡ ಎರಡೆತ್ತಿನ
ಧೃತಿ
ಕು.ಕ.
ದಂಡಲಿ
ಎಚ್. ಗೋಪಾಲಕೃಷ್ಣ
ಎನ್. ರಾಮನಾಥ್

ಬಿಡಿ ಪ್ರತಿ: ರೂ. 10.00

ಅಪರಂಜಿ

ತಿಳಿನಗೆಯ ಕಾರಂಜಿ



ಚಂದಾ ವಿವರ:

ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತ್ತು ವರ್ಷದ ಚಂದಾ: ರೂ. 750/-
ಕೆಲಸದ ವೇಳೆ:
ಬೆಳಗ್ಗೆ 8 ರಿಂದ 10 ಗಂಟೆಯವರೆಗೆ
ಮುದ್ರಣ: ರವಿ ಗ್ರಾಫಿಕ್ಸ್
ಅಕ್ಷರಜೋಡಣೆ:
ಒಮೇಗಾ ಲೇಸರ್ ಟೆಕ್

ಈ ಸಂಚಿಕೆಯಲ್ಲಿ .....



ಸಂಪುಟ 24 ಸಂಚಿಕೆ - 2

ನವೆಂಬರ್ - 2006

ಪ್ರಕಾಶಕರು: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003 ದೂರವಾಣಿ: 080- 23345259
email: aparanji@hotmail.com website: aparanjimag.com

ಸಂಪರ್ಕ ವಿಳಾಸ: ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್,
ಬಿ.ಟಿ.ಎಂ. ಲೇಔಟ್, ಬೆಂಗಳೂರು - 560 068. email: brmurthy@dataone.in



○ ಪ್ರಕಾಶ್

ಅರಣ್ಯ ಭೂಮಿ ಮಾರಾಟ; ಉಪನೊಂದಣಾಧಿಕಾರಿ ಅಮಾನತು

- ಸುದ್ದಿ

ಅರಣ್ಯ ಭೋಜನ ಅಂದರೆ ಇದೇ??

★★★

ಸಂಕ್ಷಿಪ್ತ ಹೃದಯ ತಪಾಸಣೆ

- ಶೀರ್ಷಿಕೆ

ವೈದ್ಯರ ಹೃದಯಗಳು ಸಂಕ್ಷಿಪ್ತವಾಗಿರದಿರಲಿ

★★★

ರಾಜಘಾಟ್ನಲ್ಲಿ ಅವ್ಯವಹಾರ

- ಸುದ್ದಿ

ಸಬಕೋ ಸನ್ಮತಿ ದೇ ಭಗವಾನ್

★★★

ಮನೆ ಮಾತಾಗಲಿರುವ ಸುವರ್ಣ ಸಂಸ್ಕೃತಿ ದಿಬ್ಬಣ

-ಶೀರ್ಷಿಕೆ

ಅಂಗಂದ್ರೇನ್ ಸಾ ???

★★★

ಸೀಮೆ ಎಣ್ಣೆ ಮಾರ್ಕರ್‌ಗೆ ಬ್ರಿಟನ್ ನಿಂದ ಆಮದು

-ಸುದ್ದಿ

ಸೀಮೆ ಎಣ್ಣೆ ಅಂತ ಹೆಸರೇ ಇದೆಯಲ್ಲ? ?

★★★

ರಾಜಕಾರಿಣಿಗಳು ಗಾಂಧಿಯವರ ಹೆಸರು ಹೇಳುವ ಅರ್ಹತೆಯನ್ನು ಕಳೆದುಕೊಂಡಿದ್ದಾರೆ

- ಹೇಳಿಕೆ

ಅದೇಕೆ? ದಿನನಿತ್ಯ ಗಾಂಧಿಯವರ ಚಿತ್ರವನ್ನು
ಹೇರಳವಾಗಿ ಉಪಯೋಗಿಸುತ್ತಾರಲ್ಲ ??

★★★

ಅಮೆರಿಕಾದಲ್ಲಿ ಆಸ್ತಿಕರೇ ಹೆಚ್ಚು

- ಸುದ್ದಿ

ಬುಷ್ ಅವರನ್ನು ಹೊರತಾಗಿ

★★★

ಕಾಗದದ ಮೇಲಷ್ಟೆ ಕೊಳೆಗೇರಿ ಸುಧಾರಣೆ

- ಪತ್ರಿಕೆ

ಆ ಕಾಗದವೂ ಭ್ರಷ್ಟಾಚಾರದಿಂದ ಮಾಸುತ್ತಿದೆ.

★★★

ಕಡಲೀಚೆಯ ಕುಡಿನೋಟ

– ಶಿವಕುಮಾರ್

ಇದೊಂದು ವಿಚಿತ್ರ ದೇಶ ಕಣ್ರೀ. ಇಲ್ಲಿ ನಡೆದ, ನಡೆಯುತ್ತಿರುವ 'ಪರದೆ ಪ್ರಕರಣ' ಇದಕ್ಕೊಂದು ಜ್ವಲಂತ ನಿದರ್ಶನ. ಆಗಿರೋದು ಇಷ್ಟು, ಒಂದು ಸರ್ಕಾರಿ ಪ್ರೈಮರಿ ಶಾಲೆ. ಅಲ್ಲಿನ ಮುಕ್ಕಾಲುಪಾಲು ಮಕ್ಕಳೆಲ್ಲಾ ಏಷ್ಯನ್ ಹುಟ್ಟಿನವರೇ. ಆ ಶಾಲೆಯಲ್ಲಿನ ಮುಸ್ಲಿಂ ಅಧ್ಯಾಪಕಿಯೊಬ್ಬಳು ಮಕ್ಕಳಿಗೆ ಇಂಗ್ಲೀಷ್ ಕಲಿಸುವಾಗ ಮುಖವನ್ನು ಮುಚ್ಚುವ ಪರದೆಯನ್ನು ಧರಿಸಿ ಪಾಠ ಹೇಳುತ್ತಿದ್ದಳಂತೆ. 'ಚಿಕ್ಕ ಮಕ್ಕಳು. ಅವಕ್ಕೆ ಪರದೆ ನೋಡಿದರೆ ಭಯ. ಅಲ್ಲದೆ ತುಟಿಗಳ ಚಲನೆ ಗಮನಿಸದೆ ಅವು ಉಚ್ಚಾರ ಕಲಿಯೋದಾದರೂ ಹೇಗೆ?' ಎಂದೆಲ್ಲಾ ಆ ಶಾಲೆಯ ಪ್ರಾಧ್ಯಾಪಕಿ ಇನ್ನಿಲ್ಲದ ಹಾಗೆ ಹೇಳಿದರೂ ಆ ಪರದಾ ಧಾರಿಣಿ ಮಕ್ಕಳಿಗೆ ಮುಖ ತೋರಿಸಲು ಒಪ್ಪಲಿಲ್ಲವಂತೆ. 'ಬರೀ ಹೆಣ್ಣುಮಕ್ಕಳಿದ್ದರೆ ಏನೋ ಯೋಚಿಸಬಹುದಾಗಿತ್ತು. ಗಂಡುಮಕ್ಕಳ ಮುಂದೆ ಪರದೆ ತೆಗೆಯೋದು ಅಂದ್ರೆ..............' ಅಂತ ರಾಗ ಎಳೆದಿದ್ದಕ್ಕೆ, ಪ್ರಾಧ್ಯಾಪಕಿ ಆಕೆಯನ್ನು ಕೆಲಸದಿಂದ ವಜಾ ಮಾಡಿದಳಂತೆ. ಸರಿ, ಇಲ್ಲಿನ ನ್ಯಾಷನಲ್ ಮೀಡಿಯಾದಲ್ಲಿ ಇದು ಹೆಡ್‌ಲೈನ್ ಸುದ್ದಿಯಾಯಿತು. ಮುಸ್ಲಿಂ ಧರ್ಮಾಧಿಕಾರಿಗಳನ್ನು ಇಂಟರ್ವ್ಯೂ ಮಾಡಿದ್ದೇ ಮಾಡಿದ್ದು. ಅವರೆಲ್ಲಾ ಒಕ್ಕೊರಲಿನಲ್ಲಿ, 'ಅಲ್ಪಮತೀಯರ ಮೇಲೆ ದಬ್ಬಾಳಿಕೆ ಮೊದಲು ನಿಲ್ಲಿಸಿ. ಇರಾಕಿನ ಕಗ್ಗೊಲೆಗೆ ಇತಿಶ್ರೀ ಹಾಡಿ . ಆಮೇಲೆ ಪರದೆ ವಿಚಾರ ಮಾತನಾಡೋಣ' ಅಂತ ಕೂಗಾಡಿದರು. ಒಬ್ಬ ಮೌಲ್ವಿಯಂತೂ 'ನಮ್ಮ ಮಕ್ಕಳಿಗೆ ನಾವು ಇಂಗ್ಲೀಷ್ ಹೇಗೆ ಬೇಕಾದರೂ ಕಲಿಸುತ್ತೇವೆ. ನೀವ್ಯಾರು ಕೇಳುಕ್ಕೆ' ಅಂತ ಗುಡುಗಾಡಿದ. ವಿಷಯ ಟ್ರಿಬ್ಯೂನಲ್‌ಗೆ ಹೋಯಿತು. ಇಂದು ಸಂಜೆ ತಾನೆ ಟ್ರಿಬ್ಯೂನಲ್ ತನ್ನ ತೀರ್ಪು ನೀಡಿತು. 'ಪ್ರಾಧ್ಯಾಪಕಿ ತನ್ನ ಅಧ್ಯಾಪಕಿಗೆ ಪರದೆ ತೆಗೆದು ಪಾಠ ಹೇಳುವಂತೆ ಹೇಳಿದ್ದರಲ್ಲಿ ಧರ್ಮ ಸಹಿಷ್ಣುತಾ ಕಾಯದೆಗೇನೂ ಚ್ಯುತಿ ಬಂದಿಲ್ಲ. ಆದರೆ ಆ ಅಧ್ಯಾಪಕಿಯ ಮನ ನೋಯಿಸಿದ್ದಕ್ಕಾಗಿ ಸಾವಿರದ ನೂರು ಪೌಂಡುಗಳ ದಂಡವನ್ನು ಶಾಲೆ ಆಕೆಗೆ ನೀಡಬೇಕು' ಈ ತೀರ್ಪನ್ನು ಪ್ರತಿಭಟಿಸಿ ಬ್ರಾಡ್‌ಫರ್ಡಿನಲ್ಲಿ ನಾಳೆ ಮೆರವಣಿಗೆಗಳನ್ನು ಯೋಜಿಸಿದ್ದಾರಂತೆ.

ಏತನ್ಮಧ್ಯೆ ಇಲ್ಲಿನ ಮಾಜಿ ವಿದೇಶಾಂಗ ಮಂತ್ರಿ ಜಾಕ್ ಸ್ಟ್ರಾ ತನ್ನದೇ ಆದ ಒಂದು ತಗಾದೆ ಪ್ರಾರಂಭಿಸಿದ. 'ನನ್ನ ಚುನಾವಣಾ ಕ್ಷೇತ್ರದಲ್ಲಿನ ಮುಸ್ಲಿಂ ಮಹಿಳೆಯರು ತಮ್ಮ ಸಮಸ್ಯೆಗಳನ್ನು ಚರ್ಚಿಸಲು ನನ್ನ ಆಫೀಸಿಗೆ ಬಂದಾಗ ಅವರುಗಳು ಪರದೆ ತೆಗೆದು ನನಗೆ ಮುಖ ಕೊಟ್ಟು ಮಾತನಾಡಬೇಕು. ದಕ್ಷ ಸಂವಹನಕ್ಕೆ ಇದು ಅಗತ್ಯ'. ಇದರ ಕುರಿತು ಪತ್ರಿಕೆಗಳಲ್ಲಿ ವಾದವಿವಾದಗಳಾದವು. ಈ ಗಲಾಟೆ ನಡೆಯುತ್ತಿರುವಾಗಲೇ ಒಂದು ಸೂಪರ್‌ಮಾರ್ಕೆಟ್ಟಿನಲ್ಲಿ ಬಿಳಿಯ ಕಳ್ಳನೊಬ್ಬ ಪರದೆ ಮತ್ತು ಘೋಷಾ ಉಡುಪು ಧರಿಸಿ ಬೇಕಾದಹಾಗೆ ಕಳ್ಳತನ ಮಾಡಿ ಸಿಸಿಟಿವಿ ಕಣ್ಣು ತಪ್ಪಿಸಿ ಓಡಿಹೋಗಿದ್ದ. ಟ್ಯೂಬ್ ಟ್ರೈನಿನಲ್ಲಿ

ಹೋಗುತ್ತಿದ್ದಾಗ ಅವನ ನೈಕೆ ಷೂಗಳನ್ನು ನೋಡಿದ ಪ್ರಯಾಣಿಕನೊಬ್ಬ ಪೋಲೀಸರಿಗೆ ಸುಳಿವು ನೀಡಿ ಅವನನ್ನು ಹಿಡಿಯುವಂತೆ ಮಾಡಿದ. 'ಆತಂಕವಾದಿಗಳೂ ಹೀಗೆ ಮಾಡಿದರೆ ನಾವೇನು ಮಾಡಬೇಕು?' ಅಂತ ಪತ್ರಿಕೆಯೊಂದು ತನ್ನ ಪುರವಣಿಯಲ್ಲಿ ಇದನ್ನು ಮುಖ್ಯ ವಿಷಯವನ್ನಾಗಿ ಆರಿಸಿಕೊಂಡಿತು. ಜನತೆಗೆ ಮಾಸ್ ಹಿಸ್ಟೀರಿಯಾ ತಗುಲಿದಂತೆ ಕಂಡಿತು. ಘೋಷಾ ಮಹಿಳೆಯರನ್ನು ಕಂಡ ಕೂಡಲೇ ಜನ ಭಯದಿಂದ ದೂರ ಸರಿಯಲು ಪ್ರಾರಂಭಿಸಿದರು. ಇತ್ತೀಚಿನ ಸುದ್ದಿಯಲ್ಲಿ ಮುಸ್ಲಿಂ ಮಹಿಳೆಯೊಬ್ಬಳು ಇಲ್ಲಿನ ಪೋಲೀಸ್ ದಳವನ್ನು ಸೇರಲು ಅರ್ಜಿ ಸಲ್ಲಿಸಿದ್ದಾಳಂತೆ. ಪತ್ರಿಕಾ ಭೇಟಿಯೊಂದರಲ್ಲಿ ಆಕೆ ನೀಡಿದ ಹೇಳಿಕೆ ಇದು. 'ನಮ್ಮ ದೇಶದ ರಕ್ಷಣೆಗಾಗಿ ನಾನು ಈ ಕೆಲಸವನ್ನು ಆರಿಸುತ್ತಿದ್ದೇನೆ. ಸರ್ವಧರ್ಮ ಸಹಿಷ್ಣುತೆ ನಮ್ಮ ಸಮಾಜದ ಅಡಿಗಲ್ಲು ಎಂಬುದನ್ನು ಸಾಬೀತು ಪಡಿಸಲು ಇದು ನನ್ನ ಅಳಿಲು ಸೇವೆ.' 'ಹಾಗಾದರೆ ನೀವು ಪರದೆ ತೆಗೆದುಹಾಕಿಬಿಡುತ್ತೀರಾ?' ಎಂಬ ಪ್ರಶ್ನೆಗೆ, ಆಕೆ 'ಕೆಲಸದ ಅವಧಿಯಲ್ಲಿ ಖಂಡಿತ ಪರದೆಯನ್ನು ಧರಿಸಲಾರೆ. ಮಿಕ್ಕ ಸಮಯದಲ್ಲಿ ನಾನು ಏನು ಮಾಡುತ್ತೇನೋ ಅದು ನನ್ನ ಸ್ವಂತ ವಿಷಯ' ಎಂದಳಂತೆ.

ಇಲ್ಲಿನ ಚಳಿಗಾಲ ನವೆಂಬರಿನಲ್ಲಿ ಪ್ರಾರಂಭವಾಗಿ ಮಾರ್ಚಿನವರೆಗೂ ಅವ್ಯಾಹತವಾಗಿ ಮುಂದುವರಿಯುತ್ತದೆ. ನಮ್ಮಂತಹ ಬೆಚ್ಚಗಿನ ದೇಶದಿಂದ ಬಂದವರಿಗೆ ಅಕ್ಟೋಬರಿನ ಕೊನೆಯ ಹೊತ್ತಿಗಾಗಲೇ 'ಚಳಿರಪ್ಪ ಚಳಿರೋ' ಎಂದು ನಡುಗುವ ಹಾಗಾಗುತ್ತದೆ. ಆದರೆ ಈ ಚಳಿಗೂ ಒಂದು ಆಕರ್ಷಣೆ ಇದೆ. ಸಂಜೆಯಾಯಿತೆಂದರೆ ಮನೆಯ ಡ್ರಾಯಿಂಗ್ ರೂಮಿನ 'ಬೆಂಕಿಯ ಒಲೆ' (ಫೈರ್ ಪ್ಲೇಸ್) ಚಟಪಟಗುಟ್ಟುತ್ತಾ ತನ್ನ ಜ್ವಾಲೆಗಳನ್ನು ಎಲ್ಲ ದಿಕ್ಕುಗಳಿಗೂ ಚಾಚಿ ತನ್ನದೇ ಆದ ಚೈತನ್ಯವನ್ನು ಪ್ರದರ್ಶಿಸುತ್ತದೆ. ಈ ಅಗ್ನಿ ನರ್ತನವನ್ನು ನೋಡುತ್ತಾ ಹಗಲುಗನಸಿನ ಲೋಕದಲ್ಲಿ ಗಂಟೆಗಟ್ಟಲೆ ಅಪ್ಯಾಯಮಾನವಾದ ಸಮಯವನ್ನು ಕಳೆಯಬಹುದು. ಬೆಂಕಿಯ ಮುಂದಿನ ರತ್ನಗಂಬಳಿಯ ಮೇಲೆ ಕುಳಿತೋ, ಹತ್ತಿರದ ಸೋಫಾದ ಮೇಲೆ ಮೈಚೆಲ್ಲಿ ವಿರಮಿಸಿಯೋ ಮಿತ್ರರೊಂದಿಗೆ ಹರಟುವುದೇ ಒಂದು ಮೋಜು. ಮೊನ್ನೆ ಹಳೆಯ ಗೆಳತಿ ಬಾರ್ಬರಾಳನ್ನು ನೋಡಲು ಫ್ರಾಮ್ಲಿಂಗಮ್‌ಗೆ ಹೋಗಿದ್ದಾಗ ಇಂತಹ ಅವಕಾಶವೊಂದು ಒದಗಿ ಬಂತು. ಬಾರ್ಬರಾಳ ಮನೆಯ ಅಗ್ಗಿಷ್ಟಿಕೆ ಹಳೆಯ ಕಾಲದ್ದು. ಆಧುನಿಕ ಅಗ್ಗಿಷ್ಟಿಕೆಗಳಂತೆ ಅನಿಲದಿಂದ ಬೆಂಕಿ ಉರಿಸುವ ಒಲೆ ಇದಲ್ಲ. ಹಿಂದಿನಕಾಲದಲ್ಲಿ ಬಳಕೆಯಲ್ಲಿದ್ದ ಸೌದೆ ಒಲೆ ಇದು. ಒಳ್ಳೆಯ ಒಣಗಿದ ನಾಲ್ಕು ಕಟ್ಟಿಗೆಗಳನ್ನು ಇದ್ದಲಿನ ಮೇಲೆ ವಾರಣವಾಗಿ ಪೇರಿಸಿ ಒಂದಷ್ಟು ಸೀಮೆ ಎಣ್ಣೆ ಚುಮುಕಿಸಿ ಕಡ್ಡಿ ಗೀರಿದರಾಯಿತು. ಸಣ್ಣಗೆ ಬೆಂಕಿ ಹತ್ತಿಕೊಂಡು, ಮೊದಲು ಇದ್ದಲು ಕೆಂಡವಾಗಿ ನಂತರ ಆ ಕೆಂಡಗಳು ಕಟ್ಟಿಗೆಗಳನ್ನು ಹೊತ್ತಿಸಿ, ಅಗ್ನಿದೇವ ಉದ್ಭವವಾಗಿ ತನ್ನ ನಾಲಿಗೆಗಳನ್ನು ಚಾಚುವ ದೃಶ್ಯ ನಿಜಕ್ಕೂ ಮನಮೋಹಕ.

ಆ ಸಂಜೆ ಪಕ್ಕದ ಮನೆಯ ಜಾನ್ ಮತ್ತು ಮಾರ್ಗರೆಟ್ ಮನೆಗೆ ಬಂದಿದ್ದರು. ಅಷ್ಟೇನೂ ಚಳಿಯಿಲ್ಲದಿದ್ದರೂ ನನ್ನ ಸಲುವಾಗಿ ಬಾರ್ಬರಾ ಅಗ್ನಿ ಪ್ರತಿಷ್ಠಾಪನೆ

ಮಾಡಿದ್ದಳು. ಪೀಟರ್ ಅತಿಥಿಗಳಿಗೆಲ್ಲಾ ತೀರ್ಥವಿನಿಯೋಗ ಮಾಡಿ ತನ್ನ ಮೆಚ್ಚಿನ ಸೋಫಾದಲ್ಲಿ ಬೆಂಕಿಗೆ ಕಾಲುಚಾಚಿ ಕುಳಿತಿದ್ದ. ಜಾನ್ ಹತ್ತಿರದ ಇಪ್ಸಿಚ್ ಪಟ್ಟಣದಲ್ಲಿ ಲಾಯರು.

'ಹೇಗಿದೆ ನಿನ್ನ ಕೆಲಸ?' ಅಂತ ನಾನು ಜಾನ್‌ನನ್ನ ಕೇಳಿದೆ.


'ಲಾಯರುಗಳಿಗೆ ಕೆಲಸಕ್ಕೇನು ಕಡಿಮೆ?' ಉತ್ತರಿಸಿದ್ದು ಪೀಟರ್.

'ಯಾಕೆ ಹಾಗಂತೀಯಾ ಪೀಟರ್? ಲಾಯರುಗಳಾದರೇನು ಅವರೂ ಮನುಷ್ಯರಲ್ಲವೇ.' ನಾನು ಇರಲಿ ಅಂತ ಚುಡಾಯಿಸಿದೆ.

'ಹಾಗಂತೀಯಾ ಕೂಮರ್, ಒಂದು ಸಂಗತಿ ಹೇಳ್ತೀನಿ ಕೇಳು.' ಅಮೆರಿಕಾದಲ್ಲಿ ನಿಜವಾಗಿ ನಡೆದದ್ದು ಇದು. ನಾರ್ತ್ ಕೆರೋಲೀನಾದಲ್ಲಿನ ಒಬ್ಬ ಲಾಯರು ಒಂದು ಪೆಟ್ಟಿಗೆ ಸಿಗಾರ್‌ಗಳನ್ನು ಕೊಂಡುಕೊಂಡನಂತೆ. ಬಹಳ ಬೆಲೆಬಾಳುವ ಸಿಗಾರ್‌ಗಳು ಅವು. ಕೊಂಡ ತಕ್ಷಣ ಅವುಗಳಿಗೆ ಒಂದು ಅಗ್ನಿ ವಿಮೆ ಪಾಲಿಸಿ ತೆಗೆದನಂತೆ. ಒಂದು ತಿಂಗಳ ನಂತರ, ಅವುಗಳನ್ನೆಲ್ಲಾ ಸೇದಿ ಮುಗಿಸಿ, ಇನ್ನೂ ಮೊದಲ ಪ್ರೀಮಿಯಂ ಕೂಡ ಕೊಟ್ಟಿಲ್ಲದೇ ಆತ ಇನ್ಷೂರೆನ್ಸ್ ಕಂಪನಿಗೆ ಸಿಗಾರ್‌ಗಳ ನಷ್ಟಕ್ಕೆ ಕ್ಲೇಮ್ ಹಾಕಿದನಂತೆ. ಕ್ಲೇಮ್ ನಲ್ಲಿ 'ಸಿಗಾರ್‌ಗಳು ಸಣ್ಣ ಸಣ್ಣ ಬೆಂಕಿಗಳಲ್ಲಿ ಸುಟ್ಟುಹೋದವು' ಎಂಬ ಕಾರಣವನ್ನು ನಮೂದಿಸಿದ್ದನಂತೆ. ಕಂಪನಿ ಹಣ ಕೊಡಲು ಸಹಜವಾಗಿಯೇ ನಿರಾಕರಿಸಿತಂತೆ. ಲಾಯರ್ ಕೋರ್ಟಿಗೆ ಹೋದ. ಕ್ಲೇಮನ್ನು ಗೆದ್ದೂ ಬಿಟ್ಟ. ಜಡ್ಜ್ ತನ್ನ ತೀರ್ಪನ್ನು ನೀಡುವಾಗ ಹೀಗೆಂದನಂತೆ. 'ವಾದಿಯ ಕ್ಲೇಮ್ ತೀರ ಕ್ಷುಲ್ಲಕ ಎಂಬುದನ್ನು ಒಪ್ಪುತ್ತೇನೆ. ಆದರೆ ಇನ್ಷೂರೆನ್ಸ್ ಕಂಪನಿ ಸಿಗಾರ್‌ಗಳಿಗೆ ಅಗ್ನಿವಿಮೆಯನ್ನು ನೀಡಿದ್ದಾದರೂ ಹೇಗೆ? ಕಡೆಯ ಪಕ್ಷ ಯಾವ ರೀತಿಯ ಬೆಂಕಿಗಳಿಗೆ ಹಣ ನೀಡುವುದಿಲ್ಲ ಎಂಬುದನ್ನು ಸ್ಪಷ್ಟೀಕರಿಸಬೇಕಾದದ್ದು, ಅವರ ಕರ್ತವ್ಯವಾಗಿತ್ತು. ಹಾಗೆ ಅವರು ಸ್ಪಷ್ಟೀಕರಿಸದ ಕಾರಣ ಹಣವನ್ನು ವಾದಿಗೆ ಸಲ್ಲಿಸಬೇಕಾಗುತ್ತದೆ.' ಇನ್ನೂ ಮುಂದುವರಿಸಲು ಇಷ್ಟಪಡದ ಆ ಕಂಪನಿ ಲಾಯರ್ ಕೇಳಿದ್ದ ಹದಿನೈದು ಸಾವಿರ ಡಾಲರ್‌ಗಳನ್ನು ತೆಪ್ಪಗೆ ಕೊಟ್ಟಿತು. ಆದರೆ ಹಣ ಕೊಟ್ಟು ಸುಮ್ಮನೆ ಕೂಡಲಿಲ್ಲ. ಲಾಯರ್ ತನ್ನ ಚೆಕ್ಕನ್ನು ನಗದೀಕರಿಸಿದ ತಕ್ಷಣ ಕಂಪನಿ ಲಾಯರ್ ಮೇಲೆ ಒಂದು ಕೇಸ್ ಹಾಕಿತು. 'ಕೇಸ್ ಏನು ಗೊತ್ತೇ?' ಎಂದು ಹೇಳಿ ಪೀಟರ್ ನಾಟಕೀಯವಾಗಿ ಪಾಸ್ ಮಾಡಿದ. ನಾನು ನಿಧಾನವಾಗಿ ಬೆಂಕಿಯನ್ನು ಕೆದಕಿ ಉರಿ ಬರುವಂತೆ ಮಾಡಿ, 'ಏನದು ಕೇಸು?' ಎಂದು ಕೇಳಿದೆ.

'ಇನ್ಷೂರ್ ಮಾಡಿದ ಸರಕನ್ನು ಬೇಕೆಂದೇ ಬೆಂಕಿ ಹಚ್ಚಿ ನಾಶಮಾಡಿದ ಅಪಾದನೆ. ಆರ್ಸನ್ ಅಮೆರಿಕೆಯ ದಂಡಸಂಹಿತೆಯಲ್ಲಿ ಒಂದು ಸೀರಿಯಸ್ ಅಪರಾಧ.. ಇಪ್ಪತ್ತ ನಾಲ್ಕು ಸಿಗಾರುಗಳನ್ನು ಈ ರೀತಿ ಸುಟ್ಟಿದ್ದರಿಂದ ಅವನಿಗೆ ಇಪ್ಪತ್ತ ನಾಲ್ಕು ಸಾವಿರ ಡಾಲರ್ ಫೈನ್ ವಿಧಿಸಿ, ಇಪ್ಪತ್ತನಾಲ್ಕು ತಿಂಗಳುಗಳ ಕಾರಾಗೃಹವಾಸವನ್ನೂ ವಿಧಿಸಿತಂತೆ'. ಎಲ್ಲರೂ ಸಜ್ಜನಿಕೆಯ ನಗು ನೀಡಿದರು. ನಾನು ನನ್ನ ರೀಫಿಲ್ ಗಾಗಿ ಬಾರಿನತ್ತ ನಡೆದೆ.

★★★



ನನ್ನ ದೃಷ್ಟಿಯಲ್ಲಿ ಉತ್ತಮ ಹಾಸ್ಯ ಸಾಹಿತ್ಯ

- ಬಾಗೂರು ಚಂದ್ರು

ಕೊರವಂಜಿ ಕಾಲದಿಂದ ಕನ್ನಡ ಹಾಸ್ಯ ಓದುಗರಿಗೆ ಹಾ. ರಾ. ಎಂದೇ ಪರಿಚಿತವಾಗಿರುವ ಹಾಲುವಾಗಿಲು ರಾಮಾಶಾಸ್ತ್ರಿ ಶಂಕರನಾರಾಯಣ ಇಷ್ಟರಲ್ಲೇ ತಮ್ಮ ಎಂಬತ್ತನೆಯ ಹುಟ್ಟುಹಬ್ಬ ಆಚರಿಸಲಿದ್ದಾರೆ. ಹಾ.ರಾ. 1948ರಿಂದ ಇಲ್ಲಿಯವರೆಗೂ ಮುನ್ನೂರಕ್ಕೂ ಹೆಚ್ಚು ನಗೆಲೇಖನಗಳನ್ನು ಬರೆದಿದ್ದಾರೆ. ಹಾಗೆಯೇ ವಕ್ರೇಶ ಅಂಕಿತದ ಕೆಲವು ವಚನಗಳನ್ನು ಮತ್ತು ಇಂಗ್ಲೀಷಿನಲ್ಲಿ ಒಂದು ಕಿರುನಾಟಕವನ್ನು ರಚಿಸಿದ್ದಾರೆ. ತಮ್ಮ ನಗೆಲೇಖನಗಳ ಕೆಲವು ಸಂಕಲನಗಳನ್ನು ತಾವೇ ಪ್ರಕಟಿಸಿದ್ದಾರೆ.

ಈಚೆಗೆ ಪ್ರಕಟವಾದ ಇಂತಹ ಒಂದು ಸಂಕಲನ- ನಗೆಯು ಬರುತಿದೆ. ಇದಕ್ಕೆ ಮುನ್ನುಡಿ ಬರೆದಿರುವ ಟಿ.ವಿ ವೆಂಕಟಾಚಲಶಾಸ್ತ್ರೀ ಈ ಬರಹಗಳೆಲ್ಲಾ ಮೇಲುನೋಟಕ್ಕೆ ವಿನೋದದ ಬರಹಗಳು, ನಗಿಸುವ ಬರಹಗಳು. ಆದರೆ ನೊರೆ ಬುರುಗು ಕಾಣಿಸುವ ಹೊರಮಿಂಚಿನ, ತಳುಕು ಬಳುಕಿನ ಲಘುಲೇಖನಗಳಲ್ಲ. ತಾವು ಬಾಳಿ ಬದುಕುತ್ತಿರುವ ಸುತ್ತಣ ಸಮಾಜದ, ಜೀವನ ಸಂಸ್ಕೃತಿಗಳ ಎಲ್ಲಾ ಪಾರ್ಶ್ವಗಳನ್ನೂ ಒಂದು ಬಗೆಯ ವಿಚಾರಶೀಲತೆಯ ಕೊಂಕುನೋಟದಲ್ಲಿ ಕಂಡು ಕಾಣಿಸುವ ಕರುಣಾಪೂರ್ಣವಾದ ಕೊರೆತಗಳು, ಇರಿತಗಳು ಎಂದು ಹೇಳಿದ್ದಾರೆ. ಈ ಮಾತು ಹಾ.ರಾ. ಅವರ ಎಲ್ಲಾ ಬರಹಗಳಿಗೂ ಅನ್ವಯಿಸುತ್ತದೆ.

ನನ್ನ ದೃಷ್ಟಿಯಲ್ಲಿ ಹಾ.ರಾ. ಅವರ ಅತ್ಯಂತ ಮಹತ್ವದ ಕೃತಿ- ವಕೀಲಿ ದಿನಗಳು. ಹಾ.ರಾ. ತುಮಕೂರು ಮತ್ತು ಬೆಂಗಳೂರು ನ್ಯಾಯಾಲಯಗಳಲ್ಲಿ ಅರ್ಧ ಶತಮಾನ ವಕೀಲಿ ವೃತ್ತಿ ನಡೆಸಿದ್ದಾರೆ. ಈ ಕೃತಿ ಅವರ ವೃತ್ತಿ ಜೀವನದ ನಾನಾ ಮುಖಗಳ ದರ್ಶನ. ಇದು ಅವರು ನಡೆಸಿದ ಕಟ್ಟಲೆಗಳಿಗೆ ಮಾತ್ರ ಸೀಮಿತವಾಗಿಲ್ಲ. ಇಲ್ಲಿ ಚಿತ್ರವಿಚಿತ್ರ ಕಕ್ಷಿಗಾರರು, ಸಾಕ್ಷಿಗಳು, ವಿಧವಿಧದ ಲಹರಿಯ ಸಹೋದ್ಯೋಗಿ ವಕೀಲರು, ವಿಭಿನ್ನ ಮನೋವೃತ್ತಿಯ ನ್ಯಾಯಾಧೀಶರು, ನ್ಯಾಯ ವಿತರಿಸುವ ಅಧಿಕಾರವಿರುವ ಹಿರಿಯ ಅಧಿಕಾರಿಗಳು ಒಟ್ಟಿನಲ್ಲಿ ಸಮಾಜದ ಎಲ್ಲಾ ವರ್ಗಗಳ ಜನ ರಕ್ತ ಮಾಂಸ ತುಂಬಿಕೊಂಡು ನಮ್ಮ ಮುಂದೆ ನಿಲ್ಲುತ್ತಾರೆ.

ಕಾರಂತರ ಮರಳಿ ಮಣ್ಣಿಗೆ ಅಂತಹ ಕೆಲವು ಕಾದಂಬರಿಗಳನ್ನು ಒಂದು ಪ್ರದೇಶದ, ಒಂದು ಕಾಲಘಟ್ಟದ ಮಹತ್ವದ ಸಾಂಸ್ಕೃತಿಕ ದಾಖಲೆಗಳು ಎಂದು ಗುರುತಿಸುತ್ತಾರೆ. ವಕೀಲಿ ದಿನಗಳು ಕೃತಿ ಸಹ ಈ ಪಂಕ್ತಿಯಲ್ಲಿ ನಿಲ್ಲುತ್ತದೆ ಎನ್ನುವುದು ನನ್ನ ಭಾವನೆ. ಈ ಕೃತಿ ಒಂದು ರೀತಿಯಲ್ಲಿ ತುಮಕೂರು ಜಿಲ್ಲೆಯ ಸ್ವಾತಂತ್ರ್ಯಾನಂತರದ ಐವತ್ತು ವರ್ಷಗಳ ಸಮಾಜೋ- ಸಾಂಸ್ಕೃತಿಕ ದಾಖಲೆ.

ಈ ಕೃತಿಯಲ್ಲಿನ ಆಯ್ದ ಭಾಗಗಳನ್ನು ಇಲ್ಲಿ ಓದಬಹುದು.

ವಕೀಲಿ ದಿನಗಳು

- ರಾ. ರಾ.

ನಾನು ತುಮಕೂರು ಜಿಲ್ಲೆಗೆ ಸೇರಿದವನಾದುದರಿಂದ ಜಿಲ್ಲೆಯ ಮುಖ್ಯನಗರ ತುಮಕೂರಿನಲ್ಲಿ ಪ್ರಾಕ್ಟೀಸ್ ಪ್ರಾರಂಭಿಸಿದೆ. ಮೊದಲ ದಿನ ನನಗೆ ಜ್ಞಾಪಕಕ್ಕೆ ಬಂದದ್ದು ಕೈಲಾಸಂರವರ ಒಂದು ಜೋಕು: ತುಂಕು ಊರ್ - ಹಂಕು ಸ್ಮಶಾಣ್! ಆದರೆ ನಮ್ಮೂರು ವಾಸ್ತವವಾಗಿ ಹಾಗಿರಲಿಲ್ಲ. ಹಲವಾರು ರಾಜಕಾರಣಿಗಳನ್ನೂ ಪ್ರಸಿದ್ಧ ವಕೀಲರನ್ನೂ ತಯಾರುಮಾಡಿ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕೊಟ್ಟ ಊರು. ಕೆಲವು ನ್ಯಾಯಾಧೀಶರೂ ಈ ಜಿಲ್ಲೆಯವರೆ. ಸಾಮಾನ್ಯವಾಗಿ ಆ ಕಾಲದಲ್ಲಿ ವಕೀಲಿ ವೃತ್ತಿಯನ್ನು ಹೊಸದಾಗಿ ಆರಂಭಿಸಬೇಕಾದವರು ಅವರ ಜಿಲ್ಲೆಯಲ್ಲಿ ಕೋರ್ಟುಗಳಿದ್ದ ಊರುಗಳನ್ನೇ ಆರಿಸಿಕೊಳ್ಳುತ್ತಿದ್ದರು. ದೊಡ್ಡ ನಗರಗಳಿಗೆ ಹೋಗಿ ಏಕ್‌ದಂ ಪ್ರಾಕ್ಟೀಸ್ ಪ್ರಾರಂಭಿಸಬೇಕಾದರೆ ಎರಡು ತಿಂಗಳಾದರೂ ಇರಬೇಕಾಗಿತ್ತು - ಯಾರಾದರೂ ಗಾಡ್‌ಫಾದರ್ ಅಥವಾ ಶ್ರೀಮಂತ ಮಾವ. ಆ ಕಾಲದಲ್ಲಿ ಲಾಯರುಗಳಿಗೆ ಹೆಣ್ಣುಕೊಟ್ಟು ಮದುವೆಮಾಡಲು ಜನ ಮುಂದೆ ಬರುತ್ತಿದ್ದರು. ಇದರಿಂದ ಪ್ರಾಕ್ಟೀಸ್ ಪ್ರಾರಂಭಿಸುವಷ್ಟು ಆರ್ಥಿಕ ನೆರವು ಸಿಗುತ್ತಿತ್ತು. ಈಗಿನ ಪರಿಸ್ಥಿತಿಯೇ ಬೇರೆ. ಈಗ ಲಾಯರುಗಳಿಗೆ ಹೆಣ್ಣುಕೊಡುವುದಕ್ಕೂ ಮನೆ ಬಾಡಿಗೆಗೆ ಕೊಡಲೂ ಜನ ಹಿಂಜರಿಯುತ್ತಾರೆ!

★★★

ಹಳ್ಳಿಯ ಆಡಳಿತವೆಲ್ಲಾ ಪಟೇಲ ಶ್ಯಾನುಭೋಗರ ಕೈಲಿದ್ದ ಕಾಲ. ಹಾಲುವಾಗಲು ಗ್ರಾಮದ ಪಟೇಲರು ಖಿರ್ದಿಯನ್ನು ತಿದ್ದಿ ಹಕ್ಕಿಲ್ಲದ ಹೆಸರನ್ನು ಸೇರಿಸಿದ ಅಪರಾಧಕ್ಕಾಗಿ ಸಬ್ ಡಿವಿಜನ್ ಸಾಹೇಬರ ಎದುರು ವಿಚಾರಣೆ ಎದುರಿಸುತ್ತಿದ್ದರು. ಇಲ್ಲಿ ಶಿಕ್ಷೆಯಾದರೆ ಅವರು ಊರಿನಲ್ಲಿ ತಲೆಎತ್ತಿ ತಿರುಗುವ ಹಾಗಿರಲಿಲ್ಲ. ನನಗೆ ಅವರ ಪರಿಚಯವಿತ್ತು. ಅವರು ನನಗೆ ವಕಾಲತ್ತು ಕೊಟ್ಟರು. ಏನಾದರೂ ಡಿಫೆನ್ಸ್ ಹುಡುಕಿ ಅವರನ್ನು ಖುಲಾಸೆ ಮಾಡಬೇಕಾಗಿತ್ತು. ನಾನು ಹೆಸರುಗಳನ್ನು ತಿದ್ದಿರುವ ಕೃತ್ಯವನ್ನು ಶ್ಯಾನುಭೋಗರ ಮೇಲೆ ಹೊರಿಸಿ ಸ್ಟೇಟ್‌ಮೆಂಟ್ ತಯಾರುಮಾಡಿ ಕೋರ್ಟಿಗೆ ಕೊಟ್ಟೆ. ಸಾಹೇಬರು ಅದನ್ನು ಓದಿ ಶ್ಯಾನುಭೋಗರು ಕೋರ್ಟಿಗೆ ಹಾಜರಾಗಬೇಕೆಂದು ನೋಟೀಸ್ ಕೊಟ್ಟರು. ಶ್ಯಾನುಭೋಗರು ನೋಟೀಸ್ ಹಿಡಿದುಕೊಂಡು ಓಡಿಬಂದು ನಾನೇ ಅವರ ವಕಾಲತ್ತು ತೆಗೆದುಕೊಳ್ಳಬೇಕೆಂದು ಬಲವಂತ ಮಾಡಿದರು. ಅದು ಹೇಗೆ ಸಾಧ್ಯ ನಾನೇ ವಾದಮಾಡಿದರೆ ನಿಮಗೇ ಶಿಕ್ಷೆಯಾಗುತ್ತೆ ಎಂದು ಹೇಳಿದರೂ ಅವರು ಬಿಡಬೇಕಲ್ಲ! ಬೇರೆ ಯಾವ ಉಪಾಯವೂ ಹೊಳೆಯದೆ ನನ್ನ ಸೀನಿಯರ್ ಕೈಲಿ ವಕಾಲತ್ತು ಹಾಕಿಸಿ ಫೀಸು ಕೊಡಿಸಿದೆ. ಸೀನಿಯರ್ ಒಂದು ಲಿಖಿತ ಹೇಳಿಕೆ ಬರೆದು ತಪ್ಪು ಶ್ಯಾನುಭೋಗನದಲ್ಲ ಪಟೇಲನದು ಎಂದು ನಿಲುವು ತಾಳಿದರು. ಇದನ್ನು ಓದಿದ ಸಾಹೇಬರು ಕಿಡಿಕಿಡಿಯಾಗಿ ತಕ್ಷಣ ವಾದ ಮಾಡುವಂತೆ ಒತ್ತಾಯ ಮಾಡಿದರು. ಕೇಸು

ಏಕಾಗಿದ್ದರೆ ಸೀನಿಯರ್ ಗಂಟಲು ಜೋರು! ಎಷ್ಟೋ ದಿನಗಳ ಮೇಲೆ ತಿದ್ದಿದ್ದು ಯಾರು ಎಂದು ಎಂದು ರುಜುವಾತಾಗಲಿಲ್ಲ ಎನ್ನುವ ಕಾರಣಕ್ಕಾಗಿ ಇಬ್ಬರನ್ನೂ ದೋಷಮುಕ್ತರಾಗಿ ಮಾಡಿದ ಆರ್ಡರ್ ಬಂತು.

★★★

ಕೆಲವು ವಕೀಲರು ಹಳ್ಳಿಗಳಿಂದ ಬರುವ ಕಕ್ಷಿಗಾರರು ಹಾಗೂ ಸಾಕ್ಷಿಗಳು ತಂಗಲು ಪ್ರತ್ಯೇಕ ಕೊಠಡಿಯನ್ನು ಆಫೀಸ್ ಪಕ್ಕದಲ್ಲಿ ಕಟ್ಟಿಸಿದ್ದರು. ನನ್ನ ಮನೆಯ ವರಾಂಡದಲ್ಲಿ ನನ್ನ ಕಕ್ಷಿಗಾರರು ಮಲಗುತ್ತಿದ್ದರು. ಒಂದು ದಾಂಪತ್ಯ ವಿಚ್ಛೇದನದ ಕೇಸಿನಲ್ಲಿ ಗಂಡನ ಕಡೆ ನಾನು. ದಾಂಪತ್ಯದ ಹಕ್ಕುಗಳ ಪೂರ್ವಸ್ಥಿತಿಗೂ ನನ್ನ ಕಕ್ಷಿಗಾರ ಅರ್ಜಿ ಹಾಕಿಕೊಂಡಿದ್ದ. ಹೆಂಡತಿ ಕಡೆ ಅಯ್ಯಂಗಾರರು. ಅಯ್ಯಂಗಾರರ ಮನೆ ನನ್ನ ಮುಂದಿನ ರಸ್ತೆಯಲ್ಲಿತ್ತು. ಪ್ರತಿ ಹಿಯರಿಂಗ್ ದಿವಸದ ಹಿಂದಿನ ಸಂಜೆಯೇ ಗಂಡಹೆಂಡತಿ ಇಬ್ಬರೂ ಪ್ರತ್ಯೇಕವಾಗಿ ತುಮಕೂರಿಗೆ ಬರುತ್ತಿದ್ದರು. ಗುಟ್ಟಾಗಿ ಇಬ್ಬರೂ ಜೊತೆಜೊತೆಯಾಗಿ ಸೆಕೆಂಡ್ ಷೋ ಸಿನಿಮ ನೋಡಿ ಬರುತ್ತಿದ್ದರಂತೆ. ಹೆಂಡತಿ ಅಯ್ಯಂಗಾರರ ಆಫೀಸ್ ರೂಮಿನಲ್ಲಿ ಗಂಡ ನನ್ನಮನೆಯ ವರಾಂಡದಲ್ಲಿ ಮಲಗುತ್ತಿದ್ದರು. ಬೆಳಿಗ್ಗೆ ಇಬ್ಬರೂ ಮುಖ ಸಿಂಡರಿಸಿಕೊಂಡು ಒಬ್ಬರನ್ನೊಬ್ಬರು ನೋಡದೆ ಬೇರೆಬೇರೆ ಮಾರ್ಗಗಳಲ್ಲಿ ಕೋರ್ಟು ತಲಪುತ್ತಿದ್ದರು. ಎಷ್ಟೋ ತಿಂಗಳುಗಳ ಮೇಲೆ ಈ ವಿಚಿತ್ರ ವಿಚಾರ ನಮ್ಮಿಬ್ಬರಿಗೂ ತಿಳಿಯಿತು. ಅಯ್ಯಂಗಾರರು ಒಂದು ದಿನ ಕೋರ್ಟಿನ ಹತ್ತಿರ ನನ್ನ ಕಕ್ಷಿದಾರ ಗಂಡನನ್ನು ಪ್ರಶ್ನಿಸಿದರು. ಅವನು ಅವಳು ಈಗ ಬಿಮ್ಮನಿಸಿ ಆರು ತಿಂಗಳು ಬುದ್ಧಿ ಎಂದ. ಅವತ್ತೇ ಗಂಡಹೆಂಡತಿಗೆ ಬುದ್ಧಿವಾದ ಹೇಳಿ ಯಾರ ಚಿತಾವಣೆಯಿಂದ ಕೇಸ್ ಹಾಕಿದ್ದಳೋ ಅವನಿಗೆ ಛೀಮಾರಿ ಮಾಡಿ ಪಾರ್ಟಿಗಳನ್ನು ಹಳ್ಳಿಗೆ ಕಳಿಸಿದೆವು, ಅರ್ಜಿಯನ್ನು ವಾಪಸ್ ತೆಗೆದುಕೊಂಡು!

★★★

ಕಸುಬುದಾರ ಮಹಿಳೆಯೊಬ್ಬಳು ತನ್ನ ಗಿರಾಕಿಯ ಮೇಲೆ ಒಂದು ಕ್ರಿಮಿನಲ್ ಕೇಸು ದಾಖಲುಮಾಡಿ ಕೋರ್ಟಿಗೆಳೆದಿದ್ದಳು. ಆ ಹೆಂಗಸು ಸುತ್ತಿಗೆಲ್ಲಾ ಹೆಸರುವಾಸಿಯಾದ ಇಸಮು. ಅವಳು ಮದುವೆಮನೆಗೆ ಬರುವಂತೆ ರಂಗುರಂಗಿನ ಬಟ್ಟೆ ತೊಟ್ಟು ಕಾಲಿಗೆ ಗೆಜ್ಜೆ ಕಟ್ಟಿಕೊಂಡು ಕೋರ್ಟಿಗೆ ಬರುತ್ತಿದ್ದಳು. ಕೋರ್ಟಿನ ತುಂಬಾ ಜನ ಜಮಾಯಿಸುತ್ತಿದ್ದರು. ಅದರಲ್ಲೂ ಹುಡುಗ ಲಾಯರುಗಳಿಗೆ ವಿಶೇಷ ಆಸಕ್ತಿ! ಕಂಠಿರಾಯರು ಫಿರ್ಯಾದುದಾರಳ ಪರ ಕೇಸ್ ನಡೆಸುತ್ತಾ ತುಂಬಾ ಗಂಭೀರವಾದ ಪ್ರಶ್ನೆಗಳನ್ನು ಹಾಕಿದರು. Examination-in-chief ಹೀಗೆ ಸಾಗಿತ್ತು:

ಏನಮ್ಮ ಈ ಆಪರಾಧಿಗೂ ನಿನಗೂ ಏನು ಸಂಬಂಧ

ಸಂಬಂಧ ಏನು ಬಂತು ಬುದ್ಧಿ, ಬಂದುಹೋಗಿ ಮಾಡ್ತಾನೆ.

ಫಿರ್ಯಾದು ಕೊಟ್ಟದಿನ ಏನಾಯ್ತು ಹೇಳು.

ಹಣ ಕೇಳಿದ್ದಕ್ಕೆ ಜಗಳ ಪ್ರಾರಂಭಿಸಿದ. ಲೆಕ್ಕ ಇಟ್ಕೊ ತಿಂಗಳು ಕೊನೇಲಿ ತೀರಿಸ್ತೀನಿ ಅಂದ.

ನೀನು ಏನು ಮಾಡಿದೆ?

ಪೊರಕೆ ತೊಗೊಂಡು ಚೆನ್ನಾಗಿ ಬಾರಿಸಿದೆ.

ಮುಂದೆ ಏನಾಯ್ತು?

ಅವನ ಕೈಲಿ ಒಂದು ಬ್ಲೇಡಿತ್ತು. ನನ್ನ ಎದೆ ಮೇಲೆ ಬ್ಲೇಡ್‌ಹಾಕಿ ಗೀಚಿದ. ನೋಡಿ ಗಾಯದ ಕಲೆ ಎಂದು ಹೇಳುತ್ತಾ ಸೆರಗನ್ನ ಕೆಡವಿ ಜಾಕೆಟಿನ ಗುಂಡಿಗಳನ್ನು ಬಿಚ್ಚಲು ತೊಡಗಿದಳು. ಕಂಠಿರಾಯರು ಸಾಕ್ಷಿಯನ್ನು ನೋಡುತ್ತಾ ಆ ಕಡೆ ತಿರುಗಿಕೊಂಡು ಸಾಹೇಬರಿಗೆ ತೋರಿಸು ಎಂದರು. ಮ್ಯಾಜಿಸ್ಟ್ರೇಟರು ಸಮಯಸ್ಫೂರ್ತಿಗೆ ಹೆಸರುವಾಸಿಯಾಗಿದ್ದವರು. ಅವರು ವಕೀಲರನ್ನು ನೋಡುತ್ತಾ ಕಂಠಿರಾಯರೆ, ನೀವು ನೋಡಿದ್ದೀರಲ್ಲ ಬಿಡಿ, ನಿಮ್ಮ ಮಾತಿನಲ್ಲಿ ನಮಗೆ ವಿಶ್ವಾಸವಿದೆ ಎಂದರು!

ಕಂಠಿರಾಯರು ಅಲ್ಲಿಗೇ ಬಿಡದೆ, ಹಾಗಲ್ಲ ಸ್ವಾಮಿ ನಾವು ನೋಡೋದು ಇದ್ದೇ ಇದೆ. ತಾವು ನೋಡಬೇಕು. ನ್ಯಾಯಾಧೀಶರು ಕಕ್ಷಿದಾರಳಿಗೆ ನ್ಯಾಯ ಒದಗಿಸಿಕೊಡಬೇಕು ಎಂದು ಹೇಳೇಬಿಟ್ಟರು. ಗಡಿಯಾರ ಎರಡು ಗಂಟೆ ತೋರಿಸಿದ್ದು ಒಳ್ಳೆಯದಾಯ್ತು. ಮ್ಯಾಜಿಸ್ಟ್ರೇಟರು ಸೀಟ್ ಬಿಟ್ಟುಎದ್ದು ಒಳಕ್ಕೆ ಹೋದರು. ಸಾಕ್ಷಿಕಟ್ಟೆಯಲ್ಲಿ ವಿಜೃಂಭಿಸುತ್ತಿದ್ದ ಆ ಹೆಂಗಸು ಸತ್ಯ ಎಂದ್ರೆ ಎಲ್ಲರಿಗೂ ಅಸಹ್ಯ ಎಂದು ಕಿರಿಗುಟ್ಟುತ್ತಾ ಜಾಕೆಟ್ಟಿನ ಗುಂಡಿಗಳನ್ನು ಹಾಕಿಕೊಂಡಳು!

★★★

ಆ ಕಾಲದಲ್ಲಿ ಕೋರ್ಟುಗಳಲ್ಲಿ ಆಡುಭಾಷೆಗೆ ಗೌರವವಿತ್ತು. ಆದರೆ ಇಂತಹ ಭಾಷೆ ಕೆಲವುಬಾರಿ ಹಾಸ್ಯವನ್ನು ಸೃಷ್ಟಿಸುತ್ತಿತ್ತು. ಒಂದು ದಾವಾದಲ್ಲಿ ಪ್ರತಿವಾದಿ ಹೆಂಗಸು. ಹಿಯರಿಂಗ್ ದಿನ ಅವಳು ನೇರವಾಗಿ ಕೋರ್ಟಿಗೆ ಬಂದಳು. ತನ್ನ ಕೇಸ್ ಕೂಗಿಸಿ ಹೆಸರನ್ನು ಕರೆದಾಗ ಟೈಮ್ ಬೇಕು ಸ್ವಾಮಿ ಲಾಯರನ್ನ ಮಡುಕ್ಕೋತೀನಿ ಎಂದಳು. ನ್ಯಾಯಾಧೀಶರು ಕೋರ್ಟಿನಲ್ಲಿ ಕುಳಿತಿದ್ದ ವಕೀಲರ ಸಾಲಿನ ಕಡೆಗೆ ಬೆಟ್ಟುಮಾಡಿ ಇವರಲ್ಲಿ ಯಾರನ್ನು ಬೇಕಾದರೂ ಮಡಿಕ್ಕೋ ಎಂದರು. ಗಂಭೀರವಾಗಿ ಕಾರ್ಯನಡೆಯುತ್ತಿದ್ದ ಕೋರ್ಟಿನಲ್ಲಿ ನಗುವಿನ ಅಲೆ ಎದ್ದಿತು.

ಇನ್ನೊಮ್ಮೆ ಮುನ್ಸೀಫ್ ಕೋರ್ಟಿನಲ್ಲಿ ರಾಣಿಬೆನ್ನೂರಿನಿಂದ ಬಂದಿದ್ದ ಒಬ್ಬ ಸಾಕ್ಷ್ಯಕೊಡುತ್ತಿದ್ದ. ಅವನು ಬಾರಿಬಾರಿಗೂ ಪ್ರತಿವಾದಿಯನ್ನು ಅವನ ದಿನದ ಅಭ್ಯಾಸದಂತೆ ರಂಡೇ ಮಗ ಎಂದು ಸಂಬೋಧಿಸುತ್ತಿದ್ದ. ಮುನ್ಸೀಫರು ಬೈಗುಳದ ಮಾತನ್ನು ಕೋರ್ಟಿನಲ್ಲಿ ಹೇಳಬಾರದು ಎಂದು ಎಚ್ಚರಿಕೆ ಕೊಟ್ಟಾಗ ಅವನು ರಂಡೇಮಗ ಎನ್ನುವುದು ಬೈಗುಳ ಅಂತ ಆ ರಂಡೇಮಗನಿಗೆ ಹೇಗೆ ಗೊತ್ತಾಗಬೇಕು ಸಾಹೇಬ್ರ ಎಂದು ಮತ್ತೆ ಅದೇ ಧಾಟಿಯಲ್ಲಿ ಮುಂದುವರಿದ.

★★★

ಅಡಿಷನಲ್ ಮುನ್ಸೀಫ್ ಕೋರ್ಟಿನಲ್ಲಿ ಒಬ್ಬರು ಮುಂಗೋಪಿ ಮುನ್ಸೀಫರಿದ್ದರು. ಅಡ್ಜೆರ್ನ್‌ಮೆಂಟ್ ಕೊಡುವುದಕ್ಕೆ ಯಾವಾಗಲೂ ತಕರಾರು. ಆ ಕೋರ್ಟಿನಲ್ಲಿ ಒಂದು

ಕೇಸ್ ಕೂಗಿಸಿದಾಗ ಜೂನಿಯರ್ ಲಾಯರೊಬ್ಬರು ನ್ಯಾಯಾಧೀಶರ ಖಾರವಾದ ಟೀಕೆಯನ್ನು ತಪ್ಪಿಸಿಕೊಳ್ಳುವ ಸಲುವಾಗಿ ಸಾಕ್ಷಿಗಳು ಬರದೇ ಇದ್ದರೂ ಮೊದಲನೆಯ ಸುತ್ತಿನಲ್ಲಿ ಬಹಳ ಗತ್ತಿನಲ್ಲಿ ರೆಡಿ ಎಂದಿದ್ದೂ ಅಲ್ಲದೆ ಒಬ್ಬ ಸಾಕ್ಷಿ ಬಂದಿದ್ದಾನೆ ಅಂತಲೂ ಹೇಳಿದ. ಅಂದು ಹತ್ತಾರು ಕೇಸುಗಳು ವಿಚಾರಣೆಗೆ ಇದ್ದುದರಿಂದ ಮಧ್ಯಾಹ್ನ ಕಾಲಾವಕಾಶವಿಲ್ಲದೇ ಕೇಸ್ ಹೇಗೂ ಅಡ್ಜರ್ನ್ ಆಗುತ್ತದೆ ಎಂದು ಅವನ ಧೈರ್ಯ. ದುರದೃಷ್ಟವಶಾತ್ ಸಾಕ್ಷಿಗಳ ವಿಚಾರಣೆಗೆ ಅಂದು ಯಾವ ಕೇಸಿನಲ್ಲಿಯೂ ಲಾಯರುಗಳು ಸಿದ್ಧರಾಗಿರಲಿಲ್ಲ.

ನ್ಯಾಯಾಧೀಶರು ಬೇರೆ ಕೇಸುಗಳನ್ನು ಅಡ್ಜರ್ನ್ ಮಾಡಿ ಉಳಿದಿದ್ದ ಈ ಕೇಸನ್ನು ಮತ್ತೆಮತ್ತೆ ಕೂಗಿಸಿದರು. ಜೂನಿಯರ್ ಲಾಯರ್ ಕಕ್ಕಾಬಿಕ್ಕಿಯಾಗಿ ಸೀನಿಯರನ್ನು ಕರೆತರುತ್ತೇನೆ ಎಂದು ಹೇಳಿ ಸೀನಿಯರ್ ನಂಜುಂಡಪ್ಪನವರಿಗೆ ವಿಷಯ ತಿಳಿಸಿ ತನ್ನ ಅಚಾತುರ್ಯಕ್ಕೆ ಕ್ಷಮೆ ಕೇಳಿದ. ಸೀನಿಯರಿಗೊಂದು ಉಪಾಯ ಹೊಳೆಯಿತು. ಬೇರೆ ಕೋರ್ಟಿಗೆ ಇನ್ನೊಂದು ಕೇಸಿಗೆ ಸಾಕ್ಷಿಯಾಗಿ ಬಂದಿದ್ದ ಆಸಾಮಿ ಆಚೆ ಕಡೆ ನಿಂತಿದ್ದ. ಲಾಯರು ಅವನನ್ನು ಕರೆದು ಕಿವಿಯಲ್ಲಿ ಏನೋ ಹೇಳಿದರು. ಅವನು ನಿಮಿಷಮಾತ್ರದಲ್ಲಿ ಕೋರ್ಟು ಮುಂಬಾಗದ ಕಟ್ಟೆಮೇಲೆ ನ್ಯಾಯಾಧೀಶರಿಗೆ ಕಾಣುವಂತೆ, ಕೈಕಾಲುಗಳನ್ನು ಚಾಚಿಕೊಂಡು ಶವಾಸನದಲ್ಲಿ ಮಲಗಿ ನರಳುವುದಕ್ಕೆ ಪ್ರಾರಂಭಿಸಿದ. ನಂಜುಂಡಪ್ಪನವರು ಕೋರ್ಟ್ ಮುಂದೆ ಹಾಜರಾಗಿ ಸ್ವಾಮಿ ಸಾಕ್ಷಿ ಬೆಳಗಿನಿಂದ ಇಲ್ಲೇ ಕೂತಿದ್ದ. ಬಿಸಿಲಿಗೆ ಜ್ಞಾನ ತಪ್ಪಿ ಮೂರ್ಛೆ ಹೋಗಿದ್ದಾನೆ, ಇನ್ನೂ ಮಾತು ಬಂದಿಲ್ಲ ಎಂದರು. ಯತ್ನವಿಲ್ಲದೆ ಮುನ್ಸೀಫರು ಕೇಸನ್ನು ಅಡ್ಜರ್ನ್ ಮಾಡಿದರು.

★★★

ಬಾಲಸುಂದರಂ ನನಗೆ ತುಂಬಾ ಆಪ್ತರಾಗಿದ್ದ ವಕೀಲರು. ಅವರು ಒಂದು ದಿವಸ ಬಾರ್ ಅಸೋಸಿಯೇಷನ್ ಲೈಬ್ರರಿಯಿಂದ 30-35 ಪುಸ್ತಕಗಳನ್ನು ತಂದು ಹಾರ್ಸ್‌ಷೂ ಟೇಬಲ್ ಮೇಲೆ ಜೋಡಿಸಿಟ್ಟರು. ಈ ದೃಶ್ಯವನ್ನು ನೋಡಿದ ವಕೀಲರು ಇಂದು ತಮ್ಮ ಕೇಸುಗಳಿಗೆ ಅವಕಾಶ ಸಿಗುವುದಿಲ್ಲ ಎನ್ನುವ ಆಶಾಭಾವನೆಯಿಂದಿದ್ದರು. ಬಾಲಸುಂದರಂ ವಾದ ಪ್ರಾರಂಭಿಸಿ 10-15 ನಿಮಿಷದಲ್ಲಿ ಕೇಸಿನ ಸಂಗತಿಗಳನ್ನು ವಿವರಿಸಿ 'That is all your Honour' ಎಂದು ಕುಳಿತುಬಿಟ್ಟರು. ನ್ಯಾಯಾಧೀಶರು ಅಷ್ಟೊಂದು ಅಥಾರಿಟಿಗಳನ್ನು ತಂದೀದಿರಿ. ಒಂದು ತೀರ್ಪನ್ನೂ ಉಲ್ಲೇಖಿಸಲಿಲ್ಲವೇಕೆ? ಎಂದು ಕೇಳಿದರು ಈ ಕೇಸಿಗಲ್ಲ ಸ್ವಾಮಿ ಆ ಪುಸ್ತಕಗಳು ಎಂದು ಉಪಾಯವಾಗಿ ನುಣುಚಿಕೊಂಡರು. ಎದುರಗಡೆ ವಕೀಲರು ಈ ಕೇಸಿನಲ್ಲಿ ನನ್ನ ವಾದ ಏನೂ ಇಲ್ಲ ಎಂದು ಬಿಟ್ಟರು.

ಇದನ್ನೆಲ್ಲಾ ಗಮನಿಸುತ್ತಿದ್ದ ನನಗೆ ಇಲ್ಲಿ ಏನೋ ರಹಸ್ಯವಿದೆಯೆನಿಸಿತು. ಮಧ್ಯಾಹ್ನ ಕ್ಯಾಂಟೀನಿನಲ್ಲಿ ಕಾಫಿ ಕುಡಿಯುತ್ತಿದ್ದಾಗ ಬಾಲಸುಂದರಂ - ಅಷ್ಟು ಅಥಾರಿಟಿಗಳು ಎದುರು ಕಡೆಗೆ ಉಪಯೋಗಕ್ಕೆ ಬರುವಂಥವು. ಅವರಿಗೆ ಒಂದು ಪುಸ್ತಕವೂ ಸಿಗದೆ ಹೋದುದರಿಂದ ವಾದ ಏನೂ ಇಲ್ಲ - ಎಂದು ಹೇಳಬೇಕಾಯಿತು ಎಂದು ಗುಟ್ಟು

ಬಿಟ್ಟುಕೊಟ್ಟರು. ಆದರೆ ನ್ಯಾಯಾಧೀಶರು ಗಟ್ಟಿಗರು ಏನೋ ರಹಸ್ಯವಿರಬೇಕು ಎಂದು ಯೋಚಿಸಿ ಮುಂದೆ Further arguementsಗೆ ಅವರಾಗೇ ಅವಕಾಶ ಮಾಡಿಕೊಟ್ಟರು.

★★★

ಸಿವಿಲ್ ಜಡ್ಜ್ ಕೋರ್ಟಿನಲ್ಲಿ ವಕೀಲರು, ಸಾಕ್ಷಿಗಳು, ಕಕ್ಷಿಗಾರರು ಕಾಯುತ್ತಿದ್ದಾರೆ. ಆದರೆ ನ್ಯಾಯಾಧೀಶರು ನಾಪತ್ತೆ. ಯಾರೋ ಬಂದು ಬೆಂಚ್ ಕ್ಲರ್ಕ್ ಅಣ್ಣಯ್ಯನ ಕಿವಿಯಲ್ಲಿ ಏನೋ ಹೇಳಿದರು. ಅಣ್ಣಯ್ಯ ಯಾರಿಗೂ ಏನನ್ನೂ ಹೇಳದೆ ದುರ್ದಾನ ತೆಗೆದುಕೊಂಡವರಂತೆ ಎಲ್ಲಿಗೋ ಹೊರಟುಹೋದ. ಆಮೇಲೆ ಗೊತ್ತಾಯಿತು ಅವನು ಹೋದದ್ದು ಪೊಲೀಸ್ ಸ್ಟೇಷನ್‌ಗೆ. ನ್ಯಾಯಾಧೀಶರು ಸೈಕಲ್ ಹತ್ತಿ ಮನೆಯಿಂದ ಬರುತ್ತಿದ್ದರು. ಅವತ್ತು ಅದೇನು ಯೋಚನೆ ಮಾಡುತ್ತಿದ್ದರೋ ಸರ್ಕಲಿನಲ್ಲಿ Wrong side ಬಂದುಬಿಟ್ಟರು. ವಿರೋಧ ದಿಕ್ಕಿನಲ್ಲಿ ವಾಹನದ ಚಾಲಕ ತಕ್ಷಣ ಬ್ರೇಕ್ ಅದುಮಿದ್ದರಿಂದ ಅನಾಹುತವೇನೂ ಆಗಲಿಲ್ಲ. ಆದರೆ ಅಲ್ಲಿದ್ದ ಕಾನ್‌ಸ್ಟೇಬಲ್ ಸೈಕಲ್ ಸವಾರನನ್ನು ತಡೆದು ನಿಲ್ಲಿಸಿದ. ಅವರು ತಮ್ಮ ಹೆಸರು ಹುದ್ದೆ ಹೇಳಿದಾಗ ಮ್ಯಾಜಿಸ್ಟ್ರೇಟ್-ಕೋರ್ಟು ಅಂತ ಸುಳ್ಳು ಬೇರೆ ಹೇಳ್ತೀಯ ಎಂದು ಜೋರು ಮಾಡಿ ಸೈಕಲ್ ಸವಾರರನ್ನು ಸೈಕಲ್ ಸಮೇತ ಪೊಲೀಸ್ ಸ್ಟೇಷನ್ನಿಗೆ ಕರೆದುಕೊಂಡು ಹೋದ! ಅಣ್ಣಯ್ಯ ಓಡಿದ್ದು ಅದಕ್ಕೇ. ಕಾನ್‌ಸ್ಟೇಬಲ್ ಮೊಸಬನಂತೆ. ಇನ್‌ಸ್ಪೆಕ್ಟರು ಅವನನ್ನು ಛೀಮಾರಿ ಮಾಡಿದಾಗ ಅವರು ಅಷ್ಟು ದೊಡ್ಡ ನ್ಯಾಯಾಧೀಶರಾಗಿದ್ದರೂ ಅವರಿಗೇಕೆ ಅಂತಹ ಸರಳತೆ? ಅಲ್ದೆ ಅವರು Wrong side ಯಾಕೆ ಬರಬೇಕು ಎಂದು ಅವನು ಗೊಣಗಿದನಂತೆ.


★★★

ಗೂಳೂರು ರಾಮಲಿಂಗಪ್ಪ ಒಂದು ವಿಲ್ ಬರೆದು ತಾನು ಸತ್ತಮೇಲೆ ನನ್ನ ಶ್ರಾದ್ಧಕರ್ಮಗಳನ್ನು ಯಾವ ಮಗ ಮಾಡುತ್ತಾನೋ ಅವನಿಗೆ ವಾಸದ ಮನೆ ಎಂದು ಸೂಚಿಸಿದ್ದರು. ಅವರಿಗೆ ಮೂರು ಮಕ್ಕಳು. ಊರಿನಲ್ಲಿದ್ದ ಎರಡನೆ ಮಗ ತಾನೇ ಉತ್ತರಕ್ರಿಯೆಯನ್ನು ಮಾಡಿದುದಾಗಿಯೂ ವಿಲ್ ಪ್ರಕಾರ ಮನೆ ತನಗೇ ಸೇರಬೇಕೆಂದು ದಾವಾ ಹೂಡಿಸಿದ್ದ. ನಾನು ಅವನ ಲಾಯರ್. ಇನ್ನಿಬ್ಬರು ಮಕ್ಕಳು ವಿಲ್ ಸಿಂಧುತ್ವವನ್ನು ಪ್ರಶ್ನಿಸಿ ಲಿಖಿತ ಹೇಳಿಕೆ ದಾಖಲು ಮಾಡಿದ್ದರು. ವಿಲ್ ಬಗ್ಗೆ ಸಾಕಷ್ಟು ವಿವಾದಾಂಶ ಇದ್ದರೂ ಪ್ರತಿವಾದಿ ಲಾಯರ್ ವಿಲ್ ಸಿಂಧುತ್ವದ ಬಗ್ಗೆ ತಲೆ ಕೆಡಿಸಿಕೊಳ್ಳಲೇ ಇಲ್ಲ. ಕರ್ಮಗಳನ್ನು ಮುಗಿಸಿ ಕಡೆ ದಿವಸ ಮಾಡುವ ವೈಕುಂಠ ಸಮಾರಾಧನೆಯೇ ಗಂಟೆಗಟ್ಟಲೆ ನಡೆದ ಪಾಟೀ ಸವಾಲಿನ ವಸ್ತುವಾಯಿತು. ಸಮಾರಾಧನೆಗೆ ಒಂದು ಸಾವಿರ ಜನ ಭೋಜನಕ್ಕೆ ಬಂದಿದ್ದರು ಇದಕ್ಕೆ ಸುಮಾರು ಹತ್ತು ಸಾವಿರ ರೂಪಾಯಿ ಖರ್ಚಾಯಿತೆಂದು ವಾದಿ ಸಾಕ್ಷ್ಯ ಕೊಟ್ಟನು. ಪಾಟೀಸವಾಲಿನಲ್ಲಿ ಕೇಳಿದ ಪ್ರಶ್ನೆಗಳು: ವೈಕುಂಠ ಸಮಾರಾಧನೆಗೆ ಬಂದವರ ಹೆಸರುಗಳು ಗೊತ್ತೆ? ಎಷ್ಟು ಕಟ್ಟು ಬಾಳೆಎಲೆ ತರಿಸಿದ್ದಿರಿ? ಮೊದಲ ಪಂಕ್ತಿಯಲ್ಲಿ ಎಷ್ಟು ಜನ ಕೂತಿದ್ದರು? ಅವರ ಹೆಸರುಗಳು? ಎಷ್ಟು ಪಲ್ಲ ಅಕ್ಕಿ ಖರ್ಚಾಯಿತು?

ಎಲ್ಲಿಂದ ತಂದಿರಿ? ರೇಟೆಷ್ಟು? ಅಡಿಗೆಯವರು ಎಷ್ಟು ಜನ ಬಂದಿದ್ದರು? ಅಡಿಗೆ ಐಟಂಗಳು ಏನು? ಹೆಡ್ ಕುಕ್ ಅಡ್ರೆಸ್ಸೇನು?

ಹೀಗೆ ಪ್ರಶ್ನೆಗಳ ಮೇಲೆ ಪ್ರಶ್ನೆಗಳು. ನ್ಯಾಯಾಧೀಶರಿಗೆ ತಾಳ್ಮೆ ತಪ್ಪಿತು. ಆದರೆ ವಕೀಲರು ಹಿರಿಯರು ವಯಸ್ಸಾದವರು. ಎಲ್ಲಾ ಕೇಳಿದಿರಿ ವಕೀಲರೆ, ಅವತ್ತು ಮಾಡಿದ ವಡೆಯ ಸುತ್ತಳತೆಯನ್ನು ಕೇಳಲೇ ಇಲ್ಲವಲ್ಲ ಎಂದರು ನ್ಯಾಯಾಧೀಶರು. ಅದಕ್ಕೆ ವಕೀಲರು ಅವರು ಸ್ವಲ್ಪವೂ ಎದೆಗುಂದದೆ ನಾನಿನ್ನೂ ವಡೆತನಕ ಬಂದೇ ಇಲ್ಲವಲ್ಲ ಸ್ವಾಮಿ ಎಂದು ಉತ್ತರಿಸಿದರು! ನ್ಯಾಯಾಧೀಶರೇ ಬೇಜಾರಿನಿಂದ ಆ ಕೇಸನ್ನು ಮುಂದಕ್ಕೆ ಹಾಕಿದರು. ಅಷ್ಟೇ ಅಲ್ಲ ನಮ್ಮೂರಿನಲ್ಲಿದ್ದಷ್ಟು ದಿವಸವೂ ಅವರು ಈ ಕೇಸನ್ನು ವಿಚಾರಣೆಗೆ ತೆಗೆದುಕೊಳ್ಳಲಿಲ್ಲ!

★★★



ನಾನೀಗ ತಮ್ಮನ್ನ ಏನಂದೆ ಅಂತ ಈ ರೀತಿ ಈ-ಮೇಲ್‌ನಲ್ಲಿ ಸಹಸ್ರ ನಾಮ ಅರ್ಚನೆಯನ್ನು ಟೈಪ್‌ಮಾಡಿ... ನನಗೆ ಈ-ಮೇಲ್ ಮಾಡಿದ್ದೀರಿ... ನಾನು ನಿಮಗೆ ಕಂಪ್ಯೂಟರ್ ಹೇಳಿಕೊಟ್ಟದ್ದೇ ತಪ್ಪಾಯಿತೇ....ಸರೋಜಮ್ಮ...

ಕೊರವಂಜಿ ಅಪರಂಜಿ ಟ್ರಸ್ಟ್
ಹಾಸ್ಯಬ್ರಹ್ಮ ಟ್ರಸ್ಟ್
ಅಂಕಿತ ಪುಸ್ತಕ

ಆಯೋಜಿಸಿರುವ

ದಿ|| ರಾ.ಶಿ (ಎಂ.ಶಿವರಾಂ) ಯವರ

ಜನ್ಮಶತಾಬ್ಧಿ ಸಮಾರೋಪ ಸಮಾರಂಭ

ಉದ್ಘಾಟನೆ ಮತ್ತು ಪುಸ್ತಕಗಳ ಬಿಡುಗಡೆ	:	ಶ್ರೀ ವಿಶ್ವೇಶ್ವರ ಭಟ್ ಕಾರ್ಯ ನಿರ್ವಾಹಕ ಸಂಪಾದಕರು, ವಿಜಯ ಕರ್ನಾಟಕ (ರಾ.ಶಿ.ಯವರ ಮನಮಂಥನ ಮತ್ತು ಅಪರಂಜಿ ಶಿವು ರವರ ಬೆಸ್ಟ್ ಆಫ್ ರಾ.ಶಿ.)
ಮುಖ್ಯ ಅತಿಥಿ	:	ಶ್ರೀ ಶ್ರೀನಿವಾಸ ವೈದ್ಯ
ತಂದೆಯ ನೆನಪು	:	ಡಾ|| ಓಂಪ್ರಕಾಶ್
ಉಪಸ್ಥಿತಿ	:	ಶ್ರೀ ಕೃಷ್ಣ ಸುಬ್ಬರಾವ್ ಶ್ರೀ ಬೇಲೂರು ರಾಮಮೂರ್ತಿ
ಅಧ್ಯಕ್ಷತೆ	:	ಪ್ರೊ|| ಜಿ. ವೆಂಕಟಸುಬ್ಬಯ್ಯ

ಶುಕ್ರವಾರ ತಾ|| 10.11.2006 ಸಂಜೆ 6 ಗಂಟೆಗೆ

ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್

ಬಿ.ಪಿ.ವಾಡಿಯ ರಸ್ತೆ, ಬಸವನಗುಡಿ, ಬೆಂಗಳೂರು

ತಮಗೆಲ್ಲಾ ಆದರದ ಸ್ವಾಗತ

ಸೊನ್ನೆ ಸಮಸ್ಯೆ....!

- ಗೋಪಾಲಿ

ನಾಡಿನ ಸಾಂಸ್ಕೃತಿಕ ಹಾಗೂ ರಾಜಕೀಯ ವಲಯಗಳಲ್ಲಿ ಒಂದು ದೊಡ್ಡ ಚರ್ಚೆಗೆ ಈ ವಿಷಯ ಗ್ರಾಸವಾಗುತ್ತೆ ಅಂತ ನಮ್ಮ ಶಿವಣ್ಣನಿಗೆ ಗೊತ್ತಿರಲಿಲ್ಲ. ಸಮಸ್ಯೆ ತಂಬಾ ಸಿಂಪಲ್ಲು ಅಂತ ಮೊದಲಿಗೆ ಅನಿಸಿತ್ತು. ಅದನ್ನ ಹೇಗೆ ಬೇಕಾದರೂ ಪರಿಹರಿಸಬಹುದು ಅಂಬೋ ಯೋಚನೆ ಇತ್ತು. ಆದರೆ ಸಮಸ್ಯೆ ಗಂಭೀರ ಸ್ವರೂಪ ತಳೆದಿದ್ದು ಎಲ್ಲಾ ನಾಯಕರೂ ಇದರಲ್ಲಿ ತಮ್ಮಪಾಲು ಏನು ಅಂತ ಹೇಳಿಕೆ ನೀಡೋದಕ್ಕೆ ಶುರು ಮಾಡಿದರಲ್ಲಾ ಆಗ.

ಸಮಸ್ಯೆ ಏನಪ್ಪಾ ಅಂದರೆ ಸೊನ್ನೆ ಹೇಗೆ ಬರೀಬೇಕು ಅಂಬೋದು. ಪೇಪರಿನ ಮೇಲೆ ಬಲಗಡೆಯಿಂದ ಗಡಿಯಾರದ ಮುಳ್ಳು ಸುತ್ತುವ ಹಾಗೆ - ಇದನ್ನ ಕ್ಲಾಕ್ ವೈಸ್ ಅಂತ ಬುದ್ಧಿವಂತರು ಕರಿಯೋದು - ಪೆನ್ನನ್ನ ಸುತ್ತಿಸಿ ಬರೆಯೋದನ್ನ ಲಾಗಾಯ್ತಿನಿಂದಲೂ ರೂಢಿಸಿಕೊಂಡು ಬಂದಿದ್ದರು ಮಹಿಷಾಪುರದ ಜನ. ಇದನ್ನ ಕೆಲವರು ಎಡಭಾಗದಿಂದ ಸುತ್ತೋರು - ಗಡಿಯಾರದ ಮುಳ್ಳು ರಿವರ್ಸ್ ಓಡುವ - ಇದನ್ನು ಆಂಟಿ ಕ್ಲಾಕ್‌ವೈಸ್ ಅಂತ ಅದೇ ಬುದ್ಧಿವಂತರು ಕರಿಯೋದು - ಹಾಗೆ.

ಸಮಸ್ಯೆ ಶುರುವಾಗಿದ್ದು ನಮ್ಮ ಹಳ್ಳೀಸಾಗೆ ಬೇರೆ ಊರಿನವರು ಬಂದು ಅಂಗಡಿ ಪಂಗಡಿ ತೆಗೆದು ನಮ್ಮವರನ್ನ ಕೆಲಸಕ್ಕೆ ಅಂತ ತಗೊಳ್ಳೋಕ್ಕೆ ಅಂತ ಶುರು ಮಾಡಿದರಲ್ಲಾ ಆಗ. ಆ ಕೆಲಸಕ್ಕೆ ನಮ್ಮೂರಿನಿಂದ ಬಲಗಡೆ ಸೊನ್ನೆ ಸುತ್ತೋದನ್ನ ಕಲಿತಿದ್ದ ಜನರು ಹೆಚ್ಚು ಹೆಚ್ಚಾಗಿ ಸೇರಿಕೊಂಡರು. ಎಡಗಡೆಯಿಂದ ಸೊನ್ನೆ ಸುತ್ತೋರು ಅದು ಯಾಕೋ ಹಿಂದೆ ಬಿದ್ದು ಬಿಟ್ಟರು.

ಎಡಗಡೆಯಿಂದ ಸುತ್ತೋದು, ಬಲಗಡೆಯಿಂದ ಸುತ್ತೋದೂ ಹಿಂಗೆ ಭೇದ ಭಾವ ಇಲ್ಲದ ಹಾಗೆ ಮೊದಲು ಅರ್ಧ ಸೊನ್ನೆಯನ್ನ ಎಡಗಡೆಯಿಂದ ಸುತ್ತಿ ಆಮೇಲೆ ಮಿಕ್ಕಿದ್ದು ಅರ್ಧ ಸೊನ್ನೆಯಿಂದ ಬಲಗಡೆ ಸುತ್ತಿ, ಇದೇ ರೀತಿಯಲ್ಲಿ ಮಕ್ಕಳಿಗೂ ಹೇಳಿಕೊಡಿ ಅಂತ ನಮ್ಮ ಗ್ರಾಮಪಂಚಾಯಿತಿ ತುಂಬಾ ಹಿಂದೇನೇ ಒಂದು ಫರ್ಮಾನು ಕೂಡ ಹೊರಡಿಸಿತ್ತು. ಈ ಫರ್ಮಾನು ನಮ್ಮ ಮೂಲಭೂತ ಹಕ್ಕನ್ನ ಕಸಿದುಕೊಂಡುಬಿಡುತ್ತೆ ಫರ್ಮಾನು ಜಾರಿಯಾಗಬಾರದು ಅಂತ ಒಂದು ಗುಂಪು ಕೋರ್ಟಿನ ತಾವ ಹೋಗಿ ಅದಕ್ಕೆ ಒಂದು ತಡೆಯಾಜ್ಞೆ ಕೂಡ ತಂದುಬಿಟ್ಟಿತ್ತು. ಇದು ಹಳೇ ಕತೆ.

ಈಗ ನಮ್ಮ ಬುದ್ಧಿವಂತರಲ್ಲಿ ರಾಜಕೀಯ ನಾಯಕರಲ್ಲಿ ಇದೇ ವಿಷಯ ದೊಡ್ಡ ಸಮಸ್ಯೆ ಆಗಿಬಿಟ್ಟು ಸರ್ಕಾರ ಎಡಗಡೆಯಿಂದ ಸೊನ್ನೆ ಸುತ್ತಿಸೋದನ್ನ ಆಜ್ಞೆ ಮಾಡಬೇಕು ಅಂತ ಒಂದು ಗುಂಪೂ ಎಡಗಡೆಯಿಂದ ಸೊನ್ನೆ ಸುತ್ತಿಸಬಾರದು ಬಲಗಡೆಯಿಂದಲೇ ಸುತ್ತಿಸಬೇಕು ಅಂತ ಮತ್ತೊಂದು ಗುಂಪೂ ತಮ್ಮ ತಮ್ಮ ವಾದಗಳನ್ನ ಮೊನ್ನೆ ನಮ್ಮ ಮುಖ್ಯರ ಮುಂದೆ ಮಂಡಿಸಿದವು. ಎಡಗಡೆಯಿಂದ ಸೊನ್ನೆ ಸುತ್ತುತ್ತಾ ಇದ್ದೋರು - ಈ ವರೆಗೂ

ನಿಮ್ಮ ಪಟ್ಟಣದವರೆಲ್ಲಾ ಬಲಗಡೆಯಿಂದ ಸೊನ್ನೆ ಸುತ್ತಿ ಸುತ್ತಿ ಕೆಲಸಪಲಸ ಎಲ್ಲಾದರಲ್ಲೂ ನಮಗಿಂತಲೂ ಮುಂದೆ ಹೋಗಿಬಿಟ್ಟಿದ್ದೀರಿ. ಹಳ್ಳಿಯವರೆಲ್ಲಾ ಹಿಂದೇನೇ ಉಳಕೊಂಡೆವು. ಆದರಿಂದ ಬಡವ ಬಲ್ಲಿದ ಅಂಬೋ ತಾರತಮ್ಯ ಹೆಚ್ಚಾಯಿತು. ಆದರಿಂದ ಎಲ್ಲರಿಗೂ ಒಂದೇ ಪಾಲಿಸಿ ಮಾಡಿ ಎಲ್ಲರೂ ಬಲಗಡೆಯಿಂದಲೇ ಸೊನ್ನೆ ಸುತ್ತೋ ಹಂಗೆ ಆರ್ಡರು ಮಾಡಬೇಕು ಅಂತ ವಾದ ಮಂಡಿಸಿದರು.

ಈ ವರೆಗೂ ಬಲಗಡೆಯಿಂದಲೇ ಸೊನ್ನೆ ಸುತ್ತಿಕೊಂಡು ಬಂದೋರು - ಅಪ್ಪಾ ಸೊನ್ನೆ ಹೇಗೆ ಸುತ್ತಿದರೂ ಸೊನ್ನೇಯಾ; ಈಗಿಲಿಂದಲೇ ನೀವು ನಿಮ್ಮ ಮಕ್ಕಳಿಗೆ ಬಲಗಡೆಯಿಂದ ಸೊನ್ನೆ ಸುತ್ತೋದನ್ನ ಹೇಳಿಕೊಟ್ಟುಬಿಟ್ಟರೆ ಆಮೇಲೆ ಎಡಗಡೆಯಿಂದ ಸೊನ್ನೆ ಸುತ್ತೋರು ಯಾರೂ ಇರಾಕಿಲ್ಲ. ಇದರಿಂದ ನಮ್ಮ ಸಂಸ್ಕೃತಿ ನಾಶನ ಆಗಿಬಿಡುತ್ತೆ. ಆದರಿಂದ ಎಡಗಡೆ ಸೊನ್ನೆ ಸುತ್ತೋದೇ ಶ್ರೇಷ್ಠ ಅಂತ ನೀವು ಮಂದಟ್ಟು ಮಾಡ್ಕೋಬೇಕು.... ಹೀಗೆ ತಮ್ಮ ತಮ್ಮ ವಾದ ಮಂಡಿಸಿದರು.

ಅಲ್ರೀ ಸ್ವಾಮೀ ಇಷ್ಟು ದಿವಸ ನೀವು ಬಲಗಡೆಯಿಂದಲೇ ಸೊನ್ನೆ ಸುತ್ತೀ ಸುತ್ತೀ ಇರೋ ಅವಕಾಶಗಳನ್ನೆಲ್ಲಾ ನಿಮ್ಮ ಪಾಲಿಗೆ ತಗೊಂಡ್ರೀ, ಎಡಗಡೆಯಿಂದ ಸೊನ್ನೆ ಸುತ್ತೋರು ಬಲಗಡೆಯಿಂದ ಸೊನ್ನೆ ಸುತ್ತೋರ ಬೌದ್ಧಿಕ ಮಟ್ಟ ಮುಟ್ಟೋದಕ್ಕೆ ಸಮಯ ಬೇಕಾಗ್ತದೆ - ಹಾಗೆ ನೋಡಿದರೆ ಬಲಗಡೆಯಿಂದ ಸೊನ್ನೆ ಸುತ್ತೋದಕ್ಕೇನೆ ನಿಮ್ಮ ಜ್ಞಾನ ಪೀಠದವರ ಮಕ್ಕಳೆಲ್ಲಾ ಹೋಗಿವೆ. ಈಗ ಯಾಕೆ ನಮ್ಮ ಕೂಸುಗಳಿಗೆ ಹೀಗೆ ಹಿಂಸೆ ಕೊಡ್ತೀರೀ? ನಮ್ಮ ಕೂಸುಗಳು ಬಲಗಡೆಯಿಂದ ಸೊನ್ನೆ ಸುತ್ತೋದನ್ನ ಕಲಿತುಕೊಂಡು ಸಮಾಜದಾಗೆ ಸರಿಸಮಾನರಾಗಿ ಬದುಕಬೇಕೋ ಬೇಡವೋ... ಮುಂದುವರಿದವರು ಹಿಂದೆ ಇರೋರನ್ನ ಹಿಂದೇನೇ ಇಡೋದಕ್ಕೆ ಮಾಡ್ತಿರೋ ಹುನ್ನಾರ ಇದು ಅಂತ ಬಿಸಿ ಬಿಸಿ ಮಾತುಗಳನ್ನ ಏರು ದನಿಯಲ್ಲಿ ಹೇಳಿದರು... ಸಭೆಯಲ್ಲಿ ಎರಡು ಗುಂಪಾಗಿ ಕೈ ಕೈ ಮಿಲಾಯಿಸೋ ಹಂಗಾಯಿತು...

ಪಾಪ ಪಂಚಾಯಿತಿ ಮುಖ್ಯಸ್ಥನಿಗೆ - ನಮ್ಮ ಶಿವಣ್ಣನಿಗೆ - ಅದೇನು ಹೇಳಬೇಕು ಅದೇನು ಬಿಡಬೇಕು ತಿಳೀದೇನೇ ಅಪ್ಪ ಕಿತ್ತಾಡಬೇಡ್ರೋ ಮರ್ಯಾದೆ ಮೂರುಕಾಸಿಗೆ ಹರಾಜಾಗಿಬಿಡುತ್ತೆ ನನ್ನದು ನಿಮ್ಮದು ಇಬ್ರುದೂನು. ಮತ್ತೊಮ್ಮೆ ಕೂತು ಡಿಸ್ಕಸ್ ಮಾಡುವಾ ಅಂತ ಹೇಳಿ ಸಭೆ ಬರಕಾಸ್ತು ಮಾಡವನೆ.

ಈ ಮಧ್ಯೆ ಎಡಗಡೆ ಸೊನ್ನೆ ಸುತ್ತೋ ಗುಂಪಿನಿಂದ ಕೆಲವರು ಬಲಗಡೆ ಸೊನ್ನೆ ಸುತ್ತಬೇಕು ಅನ್ನೋ ಗುಂಪಿಗೆ ಫ್ಲೋರ್ ಕ್ರಾಸ್ ಮಾಡವರಂತೆ: ಅದೇ ರೀತಿ ಇಲ್ಲಿಂದಾನೂ ಅಲ್ಲಿಗೆ ಕೆಲವರು ಹೋಗವರಂತೆ...!

ಪಾಪ ನಮ್ಮ ಐಕಳು ಕಣ್ಕಣ್ಣು ಬಿಟ್ಕೊಂಡು ಸೊನ್ನೆ ಸುತ್ತೋದು ಎಂಗೆ ಅಂತ ಮೂಗು ಒರೆಸ್ಕೋತಾ ಕೂತವೆ...!

★★★

ಪ್ರವೃತ್ತಿ

– ಸು. ವಿಜಯಲಕ್ಷ್ಮಿ

'ರೀ, ಇವತ್ತು ನಮ್ಮ ಲೇಡೀಸ್ ಕ್ಲಬ್‌ಗೆ ಒಬ್ಬರು ಭಾಷಣ ಮಾಡಲು ಬಂದಿದ್ದರು. ಅವರು ಹೇಳಿದರು ವೃತ್ತಿಯೊಡನೆ ಯಾವುದಾದರೊಂದು ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕಂತೆ. ಈಗ ನಾವು ಮಾಡೋ ಕೆಲಸ ವೃತ್ತಿ ಆಗುತ್ತದಂತೆ ಅದು ಕರ್ತವ್ಯ ಎನಿಸಿಕೊಳ್ಳುತ್ತದೆಯಂತೆ. ಪ್ರವೃತ್ತಿಯಿಂದ ಮನಸ್ಸಿಗೆ ಸಂತೋಷ, ಸಮಾಧಾನಗಳು ಸಿಗುತ್ತದಂತೆ, ನಾನೂ ಯಾವುದಾದರೂ ಪ್ರವೃತ್ತಿ ಬೆಳೆಸಿಕೊಳ್ಳೋಣ ಅಂತ ಅಂದ್ಕೊಂಡಿದೀನಿ ಕಣ್ರೀ' ಎಂದು ನನ್ನವಳು ಹೇಳಿದಾಗ, ನನಗೆ ಗಾಬರಿಯಾಯಿತು.

'ಅಲ್ಲ ಕಣೆ, ಪ್ರವೃತ್ತಿ ಯಾವುದಾದರೂ ಇದ್ದರೆ ತಾನೇ ಬೆಳೆಸಿಕೊಳ್ಳುವುದು' ಎಂದೆ ಮೆಲ್ಲಗೆ.

'ನಾನು ಏನಾದರೂ ಮಾಡೋಣ ಅಂದ್ರೆ ಈ ಅಪ್ಪ, ಮಕ್ಕಳು ಬರೀ ಕೊಂಕು ತೆಗೀತೀರಾ, ಯಾವಾಗ್ಲೂ ಹೀಗೆ'

'ಅಲ್ಲ ಕಣೆ, ನೀನು ಏನು ಮಾಡಬೇಕೂಂತ ಇದೀಯಾ ಹೇಳು, ದೇವರ ನಾಮ, ಭಾವಗೀತೆ ಕಲಿಯಲು ಬೇಕಾದರೆ ಹೋಗು' ಎಂದೆ ನಾನು.

ಅಲ್ಲೇ ಇದ್ದ ಮಗಳು 'ಅಪ್ಪಾ, ಬೇಡಕಣಪ್ಪಾ, ಅಜ್ಜಿ ಅವತ್ತು ಹೇಳಿದರು ಅಮ್ಮ ಸಣ್ಣವಳಿರುವಾಗ ಸಂಗೀತದ ಮೇಷ್ಟ್ರು ಅಮ್ಮನಿಗೆ ಪಾಠ ಹೇಳಿಕೊಡಲು ಮನೇಗೇ ಬರ್‍ತಾ ಇದ್ದರಂತೆ. ಆಮೇಲೆ ಪಕ್ಕದ ಮನೆಯವರು ಆ ಹುಡುಗಿಗೆ ಸುಮ್ಮನೆ ಯಾಕೆ ಕಷ್ಟ ಕೊಡ್ತೀರಾಂತ ಅಜ್ಜೀಗೇ ಬೈದರಂತೆ. ಅಮ್ಮನ ಸಂಗೀತ ಪಾಠ ಅವತ್ತೇ ನಿಲ್ಲಿಸಿದರಂತೆ!' ಎಂದಳು ನಗುತ್ತಾ.

'ಅಮ್ಮನಿಗೆ ಡ್ಯಾನ್ಸ್ ಕಲಿಯಲಿಕ್ಕೆ ಸಲಹೆ ಕೊಡೋಣಾಂದ್ರೆ, ನಾವು ಮಹಡಿ ಮನೇಲಿ ಇರೋದು' ಎಂದ ಮಗರಾಯ.

ಶಾರಿಗೆ ಕೋಪ ಬಂದಿತು. 'ಬೇರೆಯವರಿಗೆ ತೊಂದರೆ ಕೊಡೋ ಅಂತಹ ಪ್ರವೃತ್ತಿನೇ ಬೇಡ ನಂಗೆ. ಹೋಗಿ, ಹೋಗಿ, ನಿಮ್ಮಗಳ ಹತ್ತಿರ ಕೇಳ್ತೀನಲ್ಲಾ ನಾನು' ಎಂದಳು ಶಾರಿ.

'ಬೇಜಾರು ಮಾಡ್ಕೋಬೇಡ ಕಣೆ, ನಾನು ಆಫೀಸಿನಿಂದ ಬರುವ ಹೊತ್ತಿಗೆ ದಿನಾ ಏನಾದರೊಂದು ಹೊಸ ರುಚಿ ಮಾಡು'

'ಅಮ್ಮ ಹಳೇ ರುಚಿ ಮಾಡಿದರೂ, ಅದೇ ಹೊಸರುಚಿ ತರಹ ಇರುತ್ತೆ ಕಣಪ್ಪ. ಅಡುಗೆ, ತಿಂಡಿ ಹೆಸರು ಒಂದೇ ಆದರೂ, ಒಂದು ದಿನ ಇದ್ದ ಹಾಗೆ ಮತ್ತೊಂದು ದಿನ ಇರಲ್ಲ. ಬೇರೆ ಬೇರೆ ರುಚಿ ಇರುತ್ತೆ ಅಲ್ವಾ!' ಎಂದಳು ಮಗಳು.

'ಅಡುಗೆ ಕೆಲಸ ಬಾಯಲ್ಲಿ ಹೇಳುವಷ್ಟು ಸುಲಭ ಅಲ್ಲ. ನಾಳೆಯಿಂದ ನೀವು ಅಪ್ಪ, ಮಕ್ಕಳೇ ಅಡುಗೆ, ತಿಂಡಿ ಮಾಡಿ ಆಗ ಗೊತ್ತಾಗುತ್ತೆ.'

ಶಾರಿಯ ಮಾತು ಕೇಳಿ ಯಾಕೋ ಪರಿಸ್ಥಿತಿ ವಿಕೋಪಕ್ಕೆ ತಿರುಗುವಂತೆ ಕಾಣಿಸಿತು. ಅದನ್ನು ಮುಂದುವರಿಯಲು ಬಿಡಬಾರದೆಂದು. 'ಹೋಗ್ಲಿ ಬಿಡೆ ಶಾರಿ, ನಿನಗೆ ಯಾವುದರಲ್ಲಿ ಆಸಕ್ತಿ ಇದೆಯೋ ಅದನ್ನೇ ಮಾಡು. ನಾನಂತೂ ನಿನಗೆ ಸಂಪೂರ್ಣ ಸಹಕಾರ ಕೊಡ್ತೀನಿ' ಎಂದೆ.

'ಅಲ್ಲ ಕತೆ, ಕವನ, ಚುಟುಕು ಅದೆಲ್ಲಾ ಬರೆದರೆ ಹೇಗಿರುತ್ತೆ?' ಎಂದು ಪ್ರಶ್ನಿಸಿದಳು ಶಾರಿ.

'ಯಾವುದಾದರೂ ಒಂದು ಪ್ರಾಕಾರ ಆರಿಸಿಕೊ. ಒಳ್ಳೆಯ ಪ್ರವೃತ್ತಿ. ಆದರೆ ಓದಿ ನೋಡಿ, ಓದುತ್ತೀನಿ ಕೇಳಿ, ಅಂತ ಮಾತ್ರ ಹೇಳಬೇಡ. ಯಾರಿಗೂ ಗೊತ್ತಿಲ್ಲದ ಹಾಗೆ ಪತ್ರಿಕೆಗಳಿಗೆ ಕಳುಹಿಸು. ಪ್ರಕಟವಾದ ಮೇಲೆ ಎಲ್ಲರಿಗೂ ತಿಳಿಯುತ್ತೆ' ಆಗಲೇ ನಾವೆಲ್ಲ ಓದುತ್ತೀವಿ.

'ಅಪ್ಪ ನೀನು ಒಳ್ಳೆಯ ಐಡಿಯಾ ಕೊಟ್ಟೆ. ನಾವೆಲ್ಲ ಬೇಗ ಊಟ ಮಾಡಿಬಿಡೋಣ, ಅಮ್ಮ ಇವತ್ತಿನಿಂದಲೇ ಪ್ರವೃತ್ತಿ ಪ್ರಾರಂಭಿಸಲಿ' ಎಂದು ಘೋಷಿಸಿದ ಮಗ.

'ರೀ, ನಾನು ಅಡುಗೆ ಮಾಡುವಷ್ಟರಲ್ಲಿ ಒಂದು ರೀಂ ಪೇಪರ್, ಒಂದು ಹೀರೋ ಪೆನ್ನು, ಹಾಗೆಯೇ ಬರೆದದ್ದನ್ನು ಕಳುಹಿಸಲು ಲಕೋಟೆಗಳನ್ನು ತಂದುಬಿಡಿ.''

'ಸದ್ಯಕ್ಕೆ ಮನೆಯಲ್ಲಿರುವ ಪೆನ್ನು, ಪೇಪರು ಉಪಯೋಗಿಸು. ನಾಳೆ ಬೇಕಾದರೆ ತಂದರಾಯಿತು'.

'ನನಗೆ ಗೊತ್ತಿತ್ತು, ನೀವು ಹೀಗೆ ಹೇಳ್ತೀರಿ ಅಂತ. ನೀವೇ ಅಡುಗೆ ಮಾಡಿ. ನಾನೇ ಪೇಟೆಗೆ ಹೋಗಿ ತರ್ತೀನಿ' ಎಂದು ಶಾರಿ ಹೇಳಿದಾಗ ಪೇಟೆಗೆ ಅನಿವಾರ್ಯವಾಗಿ ಹೋಗಲೇಬೇಕಾಯಿತು.

ಶಾರಿ ತಿಳಿಸಿದ ಲೇಖನ ಸಾಮಗ್ರಿಗಳನ್ನು ಖರೀದಿಸುವಾಗ ನಗು ಬಂತು. ಎಲ್ಲವನ್ನೂ ಖರೀದಿಸಿ ಮನೆಗೆ ಬಂದೆ.

ರಾತ್ರಿ ಊಟದ ನಂತರ, ಬೇಗನೆ ಕೆಲಸಗಳನ್ನು ಮುಗಿಸಿ, ಶಾರಿ ಬರೆಯಲು ಕುಳಿತಳು. ಅವಳ ಬರೆಯುವ ಮತ್ತು ಹರಿದು ಉಂಡೆ ಕಟ್ಟಿ ಕಾಗದಗಳನ್ನು ಬಿಸಾಡುವ ಕಾರ್ಯಕ್ರಮ ಪ್ರಾರಂಭವಾಯಿತು. ಮಕ್ಕಳು ಇಣುಕಿ ನೋಡುವುದು, ಮುಸಿ ಮುಸಿ ನಗುವುದು ಮಾಡುತ್ತಿದ್ದವು. ಮಕ್ಕಳಿಗೆ ಗದರಿಸಿ, ಮಲಗಲು ತಿಳಿಸಿದೆ.

ರಾತ್ರಿ 1.00 ಗಂಟೆಯಾದರೂ ರೂಮಿನಲ್ಲಿ ದೀಪ ಉರಿಯುತ್ತಿತ್ತು. ಶಾರಿ ಎಷ್ಟು ಹೊತ್ತಿಗೆ ಮಲಗಿದಳೋ ನನಗೇ ಗೊತ್ತಾಗಲಿಲ್ಲ.

ಬೆಳಿಗ್ಗೆ ಕಣ್ಣು ಬಿಟ್ಟು ನೋಡಿದಾಗ, ರೂಮಿನಲ್ಲಿ ಪೇಪರ್ ರಾಶಿ ಬಿದ್ದಿತ್ತು. 'ಯಾಕೋ, ಒಂದೂ ಸರಿಯಾಗಲಿಲ್ಲ ಕಣ್ರಿ' ಎಂದಳು ಶಾರಿ.

ಅಲ್ಲಿದ್ದ ಮಗ 'ಒಳ್ಳೆಯದಾಯ್ತು ಬಿಡಮ್ಮ. ಇವತ್ತು ಈ ಪೇಪರುಗಳನ್ನೇ ಗುಜರಾತ್ ಬಾಯ್ಲರ್‌ಗೆ ಹಾಕಿದರೆ, ಎಲ್ಲರಿಗೂ ಸ್ನಾನಕ್ಕೆ ನೀರು ಕಾಯುತ್ತೆ. ಸಾಹಿತ್ಯದ ಸ್ನಾನ ಮಾಡಿದರಾಯ್ತು' ಎಂದ.

ಮಗನಿಗೆ ಮೃದುವಾಗಿ ಚಿವುಟಿ, ಸುಮ್ಮನಿರಲು ತಿಳಿಸಿದೆ. ಬೆಳಿಗ್ಗೇನೇ ಆಟಂಬಾಂಬ್

ಸಿಡಿದರೆ, ದಿನವಿಡೀ ಮೂಡ್ ಹಾಳಾಗುತ್ತೆ ಅಂತ! ಯಾರೂ ಹೆಚ್ಚು ಮಾತನಾಡದೆ, ಶಾರಿ ಮಾಡಿದ ಉಪ್ಪಿಟ್ಟನ್ನು ತಿಂದು, ಡಬ್ಬಿಗಳಿಗೆ ಏನು ಹಾಕಿದ್ದಾಳೆಂದು ಕೇಳದೆ, ಎಲ್ಲರೂ ಮನೆಯಿಂದ ಹೊರಬಿದ್ದೆವು.

ಸಂಜೆ ಮನೆಗೆ ಬಂದಾಗ, ಶಾರಿ ಖುಷಿಯಿಂದ ಇದ್ದಂತೆ ಕಾಣುತ್ತಿತ್ತು. ಯಾವುದಾದರೂ ಪ್ರವೃತ್ತಿಯನ್ನು ಬೆಳೆಸಿಕೊಂಡಿರಬಹುದು ಎಂದುಕೊಂಡೆ. ನಾನಾಗಿ ಏನೂ ಕೇಳಲಿಲ್ಲ. ಹೇಗಿದ್ದರೂ ವಿಷಯ ತಿಳಿಯುತ್ತದೆ ಎಂದು ಸುಮ್ಮನಿದ್ದೆ.

'ರೀ, ಇವತ್ತು ಲೇಡೀಸ್ ಕ್ಲಬ್‌ನಲ್ಲಿ ಏನಾಯಿತು ಗೊತ್ತಾ?' ಎಂದಳು ಶಾರಿ ಸಂತೋಷದಿಂದ.

'ನನಗೆ ಹೇಗೆ ಗೊತ್ತಾಗಬೇಕು ಹೇಳು' ಎಂದೆ ನಾನು.

''ಇವತ್ತು ತಹಶೀಲ್ದಾರ್ ಹೆಂಡತಿ ಗೀತಾ ಕ್ಲಬ್ಬಿಗೆ ಬಂದಿದ್ದಳು. ಏನು, ತನ್ನ ಗಂಡ, ಮಕ್ಕಳನ್ನು ಹೊಗಳಿದ್ದೇ, ಹೊಗಳಿದ್ದು! ಬೇರೆ ಯಾರಿಗೂ ಅವಕಾಶವನ್ನೇ ಕೊಡಲಿಲ್ಲ. ನಾವೆಲ್ಲರೂ ಸುಮ್ಮನೆ ಕೇಳುತ್ತಾ ಕುಳಿತುಕೊಳ್ಳಬೇಕಾಯಿತು. ಅರ್ಧ ಗಂಟೆಯಾದರೂ ನಿಲ್ಲಿಸಲೇಬಾರದೇ? ನನಗೂ ಸಿಟ್ಟು ಬಂತು. 'ರೀ, ಗೀತಾ ಬೇರೆಯವರಿಗೂ ಮಾತನಾಡಲು ಅವಕಾಶ ಕೊಡಿ. ನಮಗೂ ಗಂಡ, ಮಕ್ಕಳಿದ್ದಾರೆ. ನಾವೂ ಅವರ ಬಗ್ಗೆ ಮಾತನಾಡಬೇಕು' ಅಂತ ತರಾಟೆಗೆ ತಗೊಂಡೆ ನೋಡಿ! ಉಳಿದವರೂ ನೀವು ಸರಿಯಾಗಿ ಹೇಳಿದಿರಿ ಶಾರ್ವರಿ ಎಂದರು ಗೊತ್ತಾ'' ಎಂದಳು ಶಾರಿ ನಗುತ್ತಾ.

ಅಲ್ಲೆ ಕುಳಿತಿದ್ದ ಮಗ 'ಅಮ್ಮನಿಗೆ ಯಾವ ಪ್ರವೃತ್ತಿ ಇಷ್ಟ ಅಂತ ಗೊತ್ತಾಯ್ತಾ ಅಪ್ಪಾ? ಎಂದು ಒಳಗೋಡಿದ.

'ಈ ಪ್ರವೃತ್ತಿಗೆ ಯಾವುದೇ ಖರ್ಚೂ ಇಲ್ಲ, ಶ್ರಮವೂ ಇಲ್ಲ, ಅಲ್ವೇನಪ್ಪಾ?' ಎಂದು ಮಗಳು ಅವರಮ್ಮನ ಕಡೆ ನೋಡುತ್ತಾ ರೂಮಿಗೆ ಎದ್ದು ಹೋದಳು.

ನಾನು ಶಾರಿಯ ಮುಖ ನೋಡಿದೆ!

ಅವನಲ್ಲಿ ಅವಳಿಲ್ಲ
ಅದಕ್ಕೇ ಅವನು
HE
ಅವಳಲ್ಲಿ ಅವನಿದ್ದಾನೆ
ಅದಕ್ಕೇ ಅವಳು
SHE

–ಸುಕೇಶವ

ಸ್ಪೇರ್ ಪಾರ್ಟ್ ಸುಬ್ಬು

– ಲೋಕನಾಥ ದೀಕ್ಷಿತ್

ರೀ... ರೀ.... ಪರಿಚಿತ ಗಂಟಲು ಕಿರಲಿತು. ಈಸಿ ಛೇರ್‌ನಲ್ಲಿ ನಿದ್ರಿಸುತ್ತಿದ್ದ ನಾನು ಎಚ್ಚೆತ್ತೆ. ಇವಳು ಕರಿ ಕಾಫಿ ಕುಕ್ಕಿದಳು ''ಏನ್ರೀ ಈಗ ಏತಕ್ಕೆ ಬೇಕಾದ್ರೂ ಸ್ಪೇರ್ ಹಾಕ್ತಾರಂತೆ'' ಪ್ರಾರಂಭಿಸಿದಳು.

''ಅಂದರೆ'' ಗೊತ್ತಾಗದೆ ಕಾಫಿ ಲೋಟಕ್ಕೆ ಕೈ ಹಾಕಿದೆ.

''ಅಂದ್ರೆ ಈಗ ಯಾವ ಸಾಮಗ್ರಿಗೆ ಬೇಕಾದ್ರೂ ಸ್ಪೇರ್ ಹಾಕ್ತಾರಂತೆ'' ಸಮಜಾಯಿಷಿ ಕೊಟ್ಟಳು.

''ನೋಡೂ ನಾನು ಇಪ್ಪತ್ತೈದು ವರ್ಷ ''ಸ್ಪೇರ್ ಪಾರ್ಟ್ ಸ್ಟೋರ್''ನಲ್ಲಿ ಕೆಲಸ ಮಾಡಿರೋನು. ನನಗೆ ಸ್ಪೇರ್ ಪಾರ್ಟ್ ಸುಬ್ಬೂ ಅಂತನೇ ಬಿರಿದು ಕೊಟ್ಟಿದಾರೆ ಗೊತ್ತಾ'' ಕೊಚ್ಚಿಕೊಂಡೆ.

''ಇವಳು ನನ್ನ ಪರಾಕ್ರಮಕ್ಕೆ ಸಂತೋಷ ಪಡದೆ ಮುಖ ಸಿಂಡರಿಸಿಕೊಂಡು, ಅದಕ್ಕೆ ಹೇಳಿದ್ದು ಒಂದು ಸ್ಪೇರ್ ಹಾಕಿಸಿಕೊಳ್ಳೀಂತ'' ಸಲಹೆ ಕೊಟ್ಟಳು.

''ನಾನು ನಿನ್ನೆನೆ ವಿಚಾರಿಸಿದ್ದೇನೆ - ಬಂದ ತಕ್ಷಣ ಫೋನ್ ಮಾಡ್ತಿನಿ ಅಂತ ಹೇಳಿದ್ದಾನೆ'' ವಿಷಯ ತಿಳಿಸಿದೆ.

''ನಿಮ್ಮ ಸ್ಕೂಟರ್‌ಗೆ ಅಲ್ಲಾರಿ ನಾನು ಹೇಳಿದ್ದೂ...''

''ಮತ್ತೆ...''

''ನಿಮಗೇರೀ...''

''ಅಯ್ಯೋ ನನಗೇನೇ ಆಗಿದೆ. ನಿನ್ನೆ ತಾನೆ ಹಾರ್ಟು, ಕಿಡ್ನಿ, ಕಣ್ಣು ಎಲ್ಲಾ ಚೆಕ್ ಮಾಡಿಸಿಕೊಂಡಿದ್ದೀನಿ. ಪ್ರತಿ ಒಂದೂ ಸರಿ ಇದೆ'' ರಿಪೋರ್ಟ್ ಕೊಟ್ಟೆ.

''ಅಲ್ಲಾರೀ... ಅದೆಲ್ಲಾ ಸರಿ ಆದ್ರೆ'' ಅಂದು ಸುಮ್ಮನಾದಳು.

''ಅಯ್ಯೊ ನಿನ್ನ ತಲೆಗಿಷ್ಟು..''

''ಅದೇ... ಅದೇರಿ ನಾನು ಹೇಳ್ತಿರೋದೂ ನಮ್ಮ ತುಂಕೂರು ಶೃಂಗಾರಮ್ಮನ ಮಗ ಶಂಕ್ರೂ ಅಂತ ಇದ್ದ ನೋಡೀ...''

''ಗೊತ್ತೇ... ನಮ್ಮ ಮದ್ವೆಲಿ ಗೊಣ್ಣೆ ಬಿಟ್ಕೊಂಡು, ಬಾಯಿತುಂಬಾ ಲಾಡೂ ತುಂಬ್ಕೊಂಡು ಓಡಾಡ್ತಿದ್ದನಲ್ಲಾ''

''ಆ.... ಅವ್ನೇ... ಈಗ ದೊಡ್ಡ ಡಾಕ್ಟರು.... ಬೇಕಾದ್ರೆ ಬ್ರೈನ್ ಕೂಡಾ ಬದಲಾಯಿಸುತ್ತಾನಂತೆ...''

ಅಷ್ಟೊತ್ತು ಸುಮ್ಮನಿದ್ದ ನಾನು ಸ್ವಯಂ ನನ್ನ ಬ್ರೈನ್ ವಿಚಾರಕ್ಕೆ ಬಂದಾಗ ರೇಗಿತು. ''ಮುಚ್ಚು ಬಾಯಿ ನೀನು ಬದಲಾಯಿಸಿಕೋ ಬೇಕಾದ್ರೆ... ಆ ನಿನ್ನ ತುಂಕೂರಿನವನು ಇದಾನಲ್ಲಾ ಅವನ ಹತ್ರ, ಹೇಳೂ'' ಸೂರು ಕಿತ್ತುಹೋಗೋ ಹಾಗೆ ಕಿರುಚಿದೆ.

ಈಗ ಮನೆ ಗೇಟು ಕಿರಲಿತು. ಇವಳೇ ನೋಡಿದಳು. ''ರೀ... ದೇವರು ನನ್ನ ಕಡೆ ಇದಾನೆ'' ಅಂದು, ''ಬನ್ನಿ ಬನ್ನಿ... ನೀವು ಬರ್ತಿರೋ ಇಲ್ಲವೊ'' ಅಂತ ಹೆದರಿದ್ದೆ ಅನ್ನುತ್ತಾ ಅತಿಥಿಗಳನ್ನ ಸ್ವಾಗತಿಸಿ, ''ರೀ ನಾನು ಹೇಳ್ತಿರ್ಲಿಲ್ವೇ ಶೃಂಗಾರಮ್ಮ ಅಂತ, ಅವರೇ ಇವರು, ಇವರು ಅವರ ಮಗ ಶಂಕರರಾವ್'' ಪರಿಚಯ ಮಾಡಿಸಿದಳು.


ಬಂದ ಅತಿಥಿಗಳು ಕೂತರು. ''ಇವರು ಇದ್ದಕ್ಕಿದ್ದ ಹಾಗೆ ಕೂಗಾಡ್ಲಿಕ್ಕೆ ಪ್ರಾರಂಭ ಮಾಡ್ತಾರೆ.'' ಇವಳು ಪ್ರಾರಂಭ ಮಾಡಿದಳು.

ನನಗೆ ಏನೂ ತೋಚದೆ ಸಕ್ಕೆ. ತಕ್ಷಣ ಶೃಂಗಾರಮ್ಮ ''ನೋಡೂ ಶಂಕ್ರೂ, ನಮ್ಮ ಲಲಿತೂ ಗಂಡ ಹೀಗೆ ಆಗಿದಾರೆ ಅಂದ್ರೆ, ನನಗೆ ಹೊಟ್ಟೆ ಉರಿಯೊಲ್ಲವೇ''

ತಕ್ಷಣ ಶಂಕರ್‌ರಾವ್ ಉರೂಫ್. ಶಂಕ್ರು ತನ್ನ ಬ್ರೀಫ್‌ಕೇಸ್‌ನಿಂದ ಸ್ಟೆತಾಸ್ಕೋಪ್ ತೆಗೆದು ಅಲ್ಲಲ್ಲಿ ಇಟ್ಟು ನೋಡಿ, ''ಇವರಿಗೆ ಬ್ರೈನ್‌ನಲ್ಲಿ ಬ್ಲಡ್ ಸರ್‌ಕ್ಯುಲೇಷನ್ ಸರಿಯಿಲ್ಲಾ... ಈಗ ನೋಡೀ ಕಿಡ್ನಿ, ಹಾರ್ಟೂ ಇವುಗಳ ಹಾಗೇ ಬ್ರೈನ್ ಬ್ಯಾಂಕ್ ಇದೆ, ಅಮೇರಿಕದಲ್ಲಿ ಜನ ಅವರಿಗೆ ಬೇಕಾದಾಗ ಬದಲಾಯಿಸಿಕೊಳ್ತಾರೆ ಈಗ ನೋಡಿ ಅರ್ಜೆಂಟಿಗೆ ಒಂದು ಜಿಂಪಾಂಜಿ ಮೆದುಳು ಇದೆ, ಇದನ್ನ ನಿಮ್ಮ ಯಜಮಾನರ ತಲೆಗೆ ಹಾಕ್ತಿನಿ..'' ಅಂದ.

''ಸರಿ ಮತ್ತೆ ಬದಲಾಯಿಸಿ, ಹಾಗಾದ್ರೂ ಇವರು ತಲೆ ಸರಿಯಾಗಿ ಆಫೀಸಿನಲ್ಲಿ ಆಫೀಸರ್ ಆಗ್ತಾರೋ ಏನೋ...'' ಅಂದಳು ಲಲಿತ.

ನನಗೆ ದಿಕ್ಕೇ ತೋಚದೆ ಈಸಿ ಚೇರಿನ ಮೇಲೆ ಕುಸಿದೆ, ಶಂಕ್ರೂ ಇಂಜಕ್ಷನ್ ಚುಚ್ಚಿದ ನಾನು ಶ್ರೀರಾಮ ರಕ್ಷೆ ಅಂದೆ.



ಎಲ್ಲೋ ನೋಡಿದ...

– ಶರಣೇಗೌಡ ಎರಡೆತ್ತಿನ

ಕೆಲವರಿಗೆ 'ಮೆಮರಿ' ಅನ್ನುವುದು ತಲೆ ಬಿರಿಯುವಷ್ಟು ಇರುತ್ತದಂತೆ. ಇನ್ನೂ ಹಲವರಿಗೆ ತಲೆ ಬಿಡಿಸಿ ತುಂಬಿದರೂ ಎಳ್ಳಷ್ಟೂ ಇರುವುದಿಲ್ಲವಂತೆ: ಮುಚ್ಚಳ ತೆರೆದ ಪೆಟ್ರೋಲ್ ಪಾತ್ರೆಯಂತೆ! ಮೊದಲನೆಯ ವರ್ಗಕ್ಕೆ ಸೇರಿದವರು ಎಲ್ಲ ರಂಗಗಳಲ್ಲೂ ಶಾಂಪು ಹಾಕಿ ತೊಳೆದ ಕೂದಲಿನಂತೆ ಮಿಂಚುತ್ತಾರೆ!! ಎರಡನೆಯ ಕೆಟಗರಿಯವರೂ ಮಿಂಚುತ್ತಾರೆ; ಬಾಲ್ದಿಗಳ ತಾಮ್ರದ ಚೊಂಬಿನಂತೆ!!! ಹಾಸ್ಯಾಸ್ಪದರಾಗಿ ಹಾಸ್ಯಕ್ಕೆ ಗುರಿಯಾಗುತ್ತಾರೆ.

ನನ್ನ ಮಿತ್ರ ಸಿಂಗಳೀಕ, ಹೆಂಡತಿ ಮತ್ತು ಮಕ್ಕಳಿಗೆ ಮಾತ್ರ ತಲೆ ಹೊರೆಯಾಗಿದ್ದಾನೆ. ಆದರೆ, ಭೂಮಿಗೆ ಭಾರವಾಗದಷ್ಟು ಹಗುರ ಮನುಷ್ಯ. ಅವನು ನನ್ನ ಮಿತ್ರನಾಗಿದ್ದಕ್ಕೆ ನನಗೆ ಖುಷಿ ಇದೆ. ಏಕೆಂಬುದಕ್ಕೆ ಈ ಲೇಖನ ಓದಿದರೆ ನಿಮಗೂ ತಿಳಿಯುತ್ತೆ.

ಕಾರ್ಯನಿಮಿತ್ತ (?!) ಪೇಟೆಯ ಕಡೆಗೆ ಹೊರಟಿದ್ದೆ. ಬಹಳ ವಾರಗಳ ನಂತರ ಸಿಂಗಳೀಕ ಸಿಕ್ಕ. ಸಿಕ್ಕ ಅನ್ನುವುದಕ್ಕಿಂತಲೂ ಕಂಡಿದ್ದ ಅನ್ನುವುದೇ ಸೂಕ್ತ. ಹಾಗೆ, ನನ್ನ ಕಣ್ಣಿಗೆ ಬೀಳುವ ಮೊದಲೇ, ಬೆಕ್ಕಿನಂತೆ ಅವಸರವಸರವಾಗಿ ರಸ್ತೆ ದಾಟಿದ್ದ. ಹಾಗೇ, ಅಪಶಕುನದ ಪ್ರಾಣಿಯ (ಬೆನ್ನು) ತಟ್ಟದಿದ್ದರೆ, ನನ್ನ ಅನಿರ್ಧಿಷ್ಟ ಕೆಲಸ ಕೆಡುವುದೆಂದು, ಬೀಳುವ ಓಟದ ನಡಿಗೆಯಲ್ಲಿ ಚೇಸ್ ಮಾಡಿ, ಅವನನ್ನು ಹಿಡಿದೆ. ನನ್ನನ್ನೇ ಆಶ್ಚರ್ಯಚಕಿತನನ್ನಾಗಿಸುವಂತೆ, ಸತ್ತವರ ದೃಷ್ಟಿ ಬೀರಿ, ತುಟಿಗೆ ಬೀಗ ಜಡಿದುಕೊಂಡಿದ್ದ. ಒಂದು ಕ್ಷಣದ ನಂತರ,

''ಸಾರ್ವಜನಿಕ ರಸ್ತೆಯಲ್ಲಿ ಹೇಗೆ ನಡೆದಾಡಬೇಕೆಂದು ಗೊತ್ತಿಲ್ಲೇನ್ರೀ? ಕಣ್ಣು ಕಾಣದಿದ್ರೆ ಕನ್ನಡಕ ಮೇಲೆ ಲಾಠೀನ್ ಹಿಡಿದುಕೊಂಡು, ಎಡಭಾಗದಿಂದ ಹಾಯ್ದು ಹೋಗಿ. ಆ ಸಂಸ್ಕೃತಿಯನ್ನು ನಿಮ್ಮ ಮಕ್ಕಳಿಗೆ ತೂತು ಹೊಡೆದು ತುಂಬಿಸಿ...'' ಮೇಷ್ಟ್ರುಗಳಂತೆ ಒನ್‌ವೇ ಟ್ರಾಫಿಕ್ ಭಾಷಣವನ್ನು ಮೈಕ್ ಇಲ್ಲದ ಭಾಷಣಕಾರರಂತೆ ಊಳಿಟ್ಟಿದ್ದ. ಇದ್ಯಾವ ಹೊಸ ವರಸೆ ಅಂದುಕೊಂಡು, ನನ್ನ ಹಳೆಯ ಪಟ್ಟು ಯಾ ಅವನ ಕೊರಳುಪಟ್ಟಿ ಹಿಡಿದೆ. ತಕ್ಷಣವೇ ಮೈಮೇಲೆ ನೀರು ಚೆಲ್ಲಿಸಿಕೊಂಡ ಕುಡುಕನಂತೆ ಎಚ್ಚತ್ತು,

'ಉ...ಉ...ಹೆ...ಹೆ..ಯಾ...ಯಾರು? ಓಹೋ ನೀನಾ? ಯಾಕೋ ನನ್ನ ಕೊಳ್‌ಪಟ್ಟಿ ಹಿಡಿದೀದಿ?' ಎಂದು ಗಡಬಡಿಸಿದ್ದ.

''ಇಷ್ಟೊತ್ತಿನ ವರೆಗೆ ಈ ಪೆ... ಪೆ... ಪೆ...ಪಿ... ಪೀಪಿ ಎಲ್ಲಿಹೋಗಿತ್ತೋ? ಹಗಲೊತ್ನಲ್ಲೇ ಇಳಿಗಣ್ಣಾದ್ರೆ, ಇನ್ನೇನು?'' ಎಂದು ಹಲ್ಕಿರಿಯುತ್ತ ತುಟಿ ಕೊಂಕಿಸಿ ಕೀಟಲೆ ಮಾಡಿದೆ.

''ಒಂದೊಂದ್ಸಲ, ಸಡನ್ನಾಗಿ ಹೆಂಡ್ತಿ ಎದುರಿಗೆ ಬಂದ್ರೂ, ಗುರುತಿಸುವಷ್ಟು ನೆನಪು, ಶವಪೆಟ್ಟಿಗೆ ಸೇರಿರುತ್ತೋ, ಎಷ್ಟೋ ಸಲ ಜಿಗುಪ್ಸೆ ಬಂದು, ಒಣ ಮರಕ್ಕೆ ನೇಣು ಹಾಕಿಕೊಳ್ಳೋಣವೆಂದು ನಿಶ್ಚಯ ಮಾಡಿಯೂ ಅದನ್ನೇ ಮರ್ತುಬಿಟ್ಟು ಇನ್ನೂ (ಮೂಗು

ಮುಟ್ಟಿ ನೋಡಿಕೊಂಡು) ಉಸಿರಾಡುತ್ತಿದ್ದದ್ದು ನನ್ನ ದೌರ್ಭಾಗ್ಯ ಅಂದ್ಕೊಂಡಿದಿನಿ'... ಎಂದು ಪೇಲವ ಮುಖ ಮಾಡಿದ. ಮಾಗಿದ ಪೇರಲ ಹಣ್ಣಿನಂತೆ ಅವನ ನಿಜ ವಾಸನೆಯನ್ನು ಅರುಹುತ್ತಿತ್ತು. ಬೇಸರವಾಯಿತು.

'ಛೇ.. ಛೇ... ನಮ್ಮನ್ನೆಲ್ಲ ಸ್ವದೇಶಿಯರಾಗುಳಿಸಿಯೇ ನೀನು ಪರದೇಶಿಯಾಗ್ಬೇಡಯ್ಯ - ಮಾವನ ಅಲ್ಲಲ್ಲ ಮಾನವ ಜನ್ಮ ಬಲು ದೊಡ್ಡದು. ಹಾಳು ಮಾಡಬೇಡಿ ಹುಚ್ಚಪ್ಪಗಳಿರಾ...' ಅಂತ ದಾಸವರೇಣ್ಯರು ಹಾಡಿಲ್ವಾ?...

'ಹೌದೌದು. ಆದರೆ, ಅವರಿಗೆ, ಅವರ ಆರಾಧ್ಯ ದೇವ್ರು ಯಾವುದು ಅಂತ ಚೆನ್ನಾಗಿ ನೆನಪಿರುತ್ತಿತ್ತು. ಅದಕ್ಕೇ, ಅವರು ಏನೇನೋ ಹೇಳಿದ್ದಾರೆ. ನನ್ನ ಮರೆಗುಳಿತನ ಅವರಿಗಿದ್ದಿದ್ದರೆ... ಏನೋ ಹೊಳೆದಿತ್ತು. ಏನನ್ನೋ ಹೇಳಬೇಕೂಂತಿದ್ದೆ... ಬೇಕೂಂತಿದ್ದೆ... ಅನ್ನುವುದರಲ್ಲೇ, ಏನೂ ಹೇಳ್ತಿರಲಿಲ್ಲ ಗೊತ್ತಾ?'' ಎಂದ.

'ನಮಗೆ ವಯಸ್ಸಾದಂತೆ, ನಮ್ಮ ಮರೆವಿಗೂ ವಯಸ್ಸು ಆಗಬೇಡ ಅಂದ್ರೆ ಹೇಗೆ? ಆದರೆ, ಮರೆವನ್ನು ಕಡಿಮೆ ಮಾಡಿಕೊಳ್ಳಲು, 'ಚೀಟಿ' ವ್ಯವಹಾರ ಮಾಡಿದರಾಯಿತು' ಎಂಬ ಸಲಹೆ ಇತ್ತು ಬೀಗಿದೆ.

'ನಿನ್ನ ಮಾತು, ಹೊಸ ಡಾಕ್ಟರ್ ಹಳೆ ರೋಗಿಗೆ ಔಷಧಿ ಹೇಳಿದಂಗೆ ಆಯ್ತು ನೋಡು. ನೀನು ಹೇಳಿದ್ದನ್ನೂ ಟ್ರೈಮಾಡಿ, ಚೀಟಿ ಬರೆಯುವುದನ್ನೇ ಮರೆತು, ಕೈ-ಕೈ ಹಿಸುಕಿಕೊಂಡಿದ್ದಕ್ಕೆ, ಅಂಗೈ ಹೇಗೆ ತೆಳ್ಳಗಾಗಿವೆ ನೋಡು'' ಎಂದು ಅಂಗೈ ತೋರಿಸಿ ನಕ್ಕ. ನಾನು ಇಂಗು ತಿಂದ ಮಂಗನಾದೆ.

ಪಾಪ! ಅಂದುಕೊಂಡೆನಾದರೂ, ಇವನಿಗೆ, ಔಷಧಿಯೆಂದರೆ, ಇವನ ಶರ್ಟು ಮತ್ತು ಪ್ಯಾಂಟುಗಳ ಮೈತುಂಬ ಜೇಬು ಇಡಿಸುವುದು. ಅವುಗಳಲ್ಲಿ ಒಂದೊಂದು ಕೆಲಸದ ಚೀಟಿಯನ್ನು ತುರುಕುವುದು... ಆ ಐಡಿಯಾ ಹೊಳೆದಿದ್ದಕ್ಕೆ ಹಾಗೂ ಅಂತಹ ಶರ್ಟನ್ನು ಧರಿಸಿದ ಸಿಂಗಳೀಕನ ಚಿತ್ರವನ್ನು ಕಲ್ಪಿಸಿಕೊಂಡು ಅರಿವಿಲ್ಲದಂತೆ ಜೋರಾಗಿ ನಕ್ಕೆ. ನಾನು ನಕ್ಕುದುದು ತಿಳಿಯಿತೆನ್ನುವಂತೆ, ಅವನೂ ತಲೆಯಾಡಿಸಿ ಬಾಯಿಬಿಟ್ಟ.

'ನಮ್ಮಾಫೀಸಿನಲ್ಲಿ ನಾನು ಜವಾನರಿಗಿಂತಲೂ ಕಡೆಯಾಗಿದ್ದೀನಿ ಕಣೋ'... ಅಂತ ಅಳುವವರಿಗಿಂತ ಕಡೆಯಾಗಿ ಮುಖ ಮಾಡಿದ.

''ಸಧ್ಯ. ಅವರ ಗುರುತು ತಪ್ಪಿಲ್ಲ'' ಯಾಕೆಂದರೆ ಅವರು ಅವರ ಚೇಂಬರಿನಲ್ಲಿ ಮಾತ್ರ ಕಾಣಿಸಿಕೊಳ್ಳೋದು. ಆದರೆ, ನನ್ನನ್ನು ಕರೆಯಿಸಿ, ಆ ಪತ್ರ, ಈ ಪತ್ರ ಎಲ್ಲಿ ಅಂತ ಕೇಳಿದರೆ ಸಾಕು. ನಾನು ಹೌಹಾರುತ್ತೇನೆ. ಆಗ ಎಲ್ಲ ತಾಪತ್ರಯಕ್ಕಿಟ್ಟುಕೊಳ್ಳುತ್ತದೆ. ಎದೆ ಝುಲ್... ಝುಲ್ ಅನ್ನುತ್ತದೆ. ಬೆವರು, ಚಳಿಗಾಲದ ಮಳೆಯಂತೆ ಸುರಿಯುತ್ತದೆ. ಸಾಹೇಬರಿಂದ ತಪ್ಪಿಸಿಕೊಳ್ಳಲು, ಅಂಥ ಪತ್ರ ಯಾವುದೂ ಬಂದಿಲ್ಲ ಸಾಽಽ... ಅನ್ನೋ ಟೇಪನ್ನು ರೀವೈಂಡ್ ಮಾಡುತ್ತಲೇ, ಅಲ್ಲಿಂದ ಪಾರಾಗುವ ಯತ್ನ ಮಾಡುತ್ತೇನೆ. ನಿನ್ನ ತಲೆ ಅಂತ ಬೈದು, ಆ ತಪ್ಪಿಗಾಗಿ, ಅವರು ತಮ್ಮ ತಲೆಗ ಕೈ ಹಚ್ಚಿಕೊಳ್ಳುತ್ತಾರೆ. ನನ್ನನ್ನೂ ತಲೆಗ ಕೈ ಹಚ್ಚುವಂತೆ ಮಾಡುತ್ತಾರೆ...'

'ಥೇ... ಥೇ... ನಿನ್ನ ಲೈಫು, ಒಂಥರ ಸ್ಪೈಫು ಅಸ್ಟು...'

'ನನ್ನ ಲೈಫು ಬಗ್ಗೆ ಎಷ್ಟು ಹೇಳದ್ರೂ, ಕಡಿಮೆ ಬಿಡು. ಆಫೀಸಿನಲ್ಲಿ ಯಾರಾದರೂ ಪರಿಚಯಸ್ಥರು ನಮಸ್ಕಾರ ಸಾಽಽ... ಹೇಗಿದ್ದೀರಿ? ಅಂದಾಕ್ಷಣವೇ, ಅವರ್‍ಯಾರು? ಅವರನ್ನು ಎಲ್ಲೋ ನೋಡಿರುವೆನಲ್ಲ... ಎಲ್ಲಿ?.. ಎಲ್ಲಿ?... ಎನ್ನುವ ದೊಡ್ಡ ದೊಡ್ಡ ಪ್ರಶ್ನಾರ್ಥಕ ಚಿಹ್ನೆಗಳು ಹಾಗೆ ಕೇಳಿದವರು ಗುರುತಿಸುವಷ್ಟು ಮುಖದ ಮೇಲೆ ಕುಣಿದಾಡುತ್ತಿವೆ! ಅವರೇ ಸೈಕಾಲಜಿಸ್ಟ್ ಆಗಿ, ನಸುನಕ್ಕು, ಗುರ್ತು ಸಿಗಲಿಲ್ಲ ಸಾಽಽ... ನಾನು ಇಂತಿಂಥವನು... ಅಂತ ಹೆಳವರ ಹಾಗೆ ಪರಿಚಯ ಹೇಳಿಕೊಂಡು ನಸುನಗುತ್ತಾರೆ. ನಾನು, ಪಾಪ! ಅಯ್ಯೋ... ಅಂತ ನಿಡುಸುಯ್ಯುವ ಮೊದಲೇ ಅವರು ಅಂತರ್ಧಾನರಾಗಿರುತ್ತಾರೆ. ಆಗ ಅವರು, ದೇವರೇ? ಎಂಬ ಸಂಶಯ ಗಂಟು ಬೀಳುತ್ತದೆ. ಆದರೆ, ಯಾವ ದೇವರಿರಬಹುದು? ಎಂಬುದು ಹೊಳೆಯುವುದೇ ಇಲ್ಲ! ಇಲ್ಲಿ ಕೇಳು. ಒಂದು ಸಲ ಹೇಗಿದ್ದೀರಿ ಸಿಂಗಣ್ಣ? ಅಂತ ಒಬ್ಬಾತ ಕೇಳಿದ. ನಾನು, ಆತ ಯಾರಿರಬಹುದೆಂದು ತಲೆಯನ್ನು ಕಜ್ಜಿಹತ್ತಿದ ನಾಯಿಯಂತೆ ಕೆರೆದುಕೊಂಡೆ. ಆತ ದುರುದುರು ನೋಡಿ, ಬಿರ ಬಿರ ಅಂತ ಹೋದ. ಆಗ ನನ್ನಾಕೆ ನೆರವಿಗೆ ಬಂದಿದ್ದಳು. ಅವರು ನಿಮ್ಮ ದೋಸ್ತ್ ಎಮ್ಮೆಲೆ ಸಂಬಂಧಿ - ಈಶ್ವರ ಅಲ್ವೇನ್ರಿ?... ಅವರೇ 'ಸೆಕೆಂಡ್ಸ್' ತಗಳ್ಳದೇ ಮಿನಿಟು ಕೊಡಿಸಿದ್ರಲ್ಲ... ಎಂದು ನನ್ನ ನೆನಪನ್ನು ನಾಯಿ ಚುಳಚಿಯಿಂದ ಬಡಿದೆಬ್ಬಿಸಿದಾಗಲೇ, ನನಗೆ ಕೃತಘ್ನತೆಯ ಅರಿವಾಗಿತ್ತು''...

'ನಿನ್ನ ಆ ನೆನಪು, ಭಾರಿ ಪಳೆಯ ಅಳಿಯ ದೇವ್ರ ಹಾಗೆ ಬಿಡು'... ಅಂದು ನಿಃಶಬ್ದವಾಗಿ ನಕ್ಕೆ.

'ಇಲ್ಲಿ ಕೇಳು'... ಅಂದು ಮುಂದಲೆ ಕೆರೆದುಕೊಂಡ; ರಿಮೋಟ್ ಬಟನ್ ಒತ್ತುವಂತೆ. ''ಹ್ಞಾಂ... ನೆನಪಿಗೆ ಬಂತು. ಒಂದ್ಸಲ, ನನ್ನ ಹೆಂಡತಿಯ ಅಣ್ಣ, ಅರ್ಥಾತ್ ನಮ್ಮ ಭಾವ, ಕಾರ್ಯನಿಮಿತ್ತ ಕತ್ತೆಕಾಲು ಹಿಡಿಯಲು, ನಮ್ಮಾಫೀಸಿನ ನನ್ನ ಟೇಬಲ್ಲಿಗೆ ಬಂದು, ಕನ್ನಡಿ ಮುಂದಿನ ದೇಶಾವರಿ ನಗೆ ಬೀರಿದ್ದ. ನಾನೋ, ಜ್ಞಾನೋದಯವಾಗುವ ಸ್ಥಿತಿಯಲ್ಲಿದ್ದ ಬುದ್ಧನಂತಿದ್ದೆ. ನಿಧಾನವಾಗಿ, ಅವನತ್ತ ಕಣ್ಣು ಬಿಟ್ಟಿದ್ದೆ. ಅವನನ್ನು ಸಮಾಧಿ ಸ್ಥಿತಿಯಲ್ಲಿದ್ದಾಗ ನೋಡಿದ್ದೆ ಅಂತ ಅನ್ನಿಸಹತ್ತಿತ್ತು. ನೆನಪಿನ ಹುತ್ತವನ್ನು ಕೆದಕಲು ಕೈ ಹಾಕಿದ್ದೆ. ಅದರಲ್ಲಿ ಗೆದ್ದಲಾಗಲಿ, ಹಾವಾಗಲಿ ಇರಲಿಲ್ಲ. ಧೈರ್ಯದಿಂದಲೇ ಬಂದದ್ದು ಬರಲೆಂದು ದೇಶಾವರಿ ನಗೆ ಬೀರಿ, ನನ್ನ ಕಾಯಿಲೆ ಅವರಿಗೆ ತಿಳಿಯಬಾರದೆಂದು, 'ಏನ್ರಿ... ಭಾಳ ದಿನಗಳ ನಂತರ ಬಂದಿದ್ದೀರಲ್ಲ... ಏನ್ಸಮಾಚಾರ?... ಅಂತ ಹಳೆಯ ತುಕ್ಕು ಹಿಡಿದ ಖಡ್ಗದ ಹಳೆಯ ವರಸೆ ಬಿಚ್ಚಿದ್ದೆ. ಅದರಲ್ಲಿ, ನನಗಾಗಿಯೇ ನನ್ನ ಗೋರಿಗೆ ಪ್ರಶ್ನೆಯ ಗುದ್ದಲಿ ಪೂಜೆ ಮಾಡಿಕೊಂಡಿದ್ದೆ. ಆದರೆ, ಆ ನನ್ನ ಅನಿಷ್ಟ ಭಯ ಕುಶಲೋಪರಿಯಿಂದ ಆತನಿಗೆ ಏನನ್ನಿಸಿತೋ ಏನೋ? ಮುಖದಲ್ಲಿ ಯಾವುದೇ ಭಾವವನ್ನು ವ್ಯಕ್ತಪಡಿಸಲಾಗದ ನಾಯಕ ನಟನಂತೆ,

'ನಾನು, ನಾಲ್ಕೇ ದಿವಸಗಳ ಹಿಂದೆ ಬಂದು ಹೋಗಿದ್ದನ್ನು ಎಷ್ಟು ಚೆನ್ನಾಗಿ ನೆನಪಿಟ್ಟುಕೊಂಡೂ ಭಾಳ ತಮಾಷೆ ಮಾಡ್ತಿದೀರಿ ಭಾವ'... ಅಂದು ನಕ್ಕು, ಅಕ್ಕ ಇಲ್ಲದ್ದಕ್ಕೆ

ಇದು ಮನೆ ಅಂತ ಅಂದ್ಕೊಂಡಿದ್ದೀನಿ. ಅದಿರ್ಲಿ ನಮ್ಮ ಶಾಲೆಯದು ಒಂದು ಫೈಲು ನಿಮ್ಮ ಹತ್ತಿರ ಬಂದಿದೆಯಂತೆ. ಒಂದಿಷ್ಟು ಬೇಗ ಹೊತ್ತು ಹಾಕಲಿಕ್ಕೆ ಬೇಕಾಗುತ್ತೆ. ಇದನ್ನು ಇಟ್ಕಳಿ' ಅಂದವರೇ ನೂರರ ಒಂದು ನೋಟನ್ನು ನನ್ನ ಜೇಬಿಗೆ ಕೆಂಡದುಂಡೆಯಂತೆ ತುರುಕಿ, ಇದ್ದಲಿಯಂತೆ ನಡೆದು ಹೋಗಿದ್ದ.

'ನಿನ್ನ ಪುಣ್ಯ, ಕಛೇರಿಯಿಂದಲೇ ಏರೋಪ್ಲೇನ್ ಹತ್ತಲಿಲ್ಲವಲ್ಲ... ಆಮೇಲೇ?'

'ಆಮೇಲೇನಾ? ಅಂದು ಕತ್ತೆ ಕಿವಿಯಷ್ಟು ಉದ್ದವಾಗಿದ್ದ ಕಿವಿಗಳನ್ನೊಮ್ಮೆ ಎಳೆದುಕೊಂಡು ಮಧ್ಯಾಹ್ನದ ಊಟಕ್ಕೆ ಮನೆಗೆ ಹೋಗಿದ್ದೆ. ಮನೆಯಲ್ಲಿ ಅದೇ ವ್ಯಕ್ತಿ ಕೃಷ್ಣನಂತೆ ಪ್ರತ್ಯಕ್ಷನಾಗಿದ್ದ. ಅವನನ್ನು ಕಂಡಾಕ್ಷಣ ಅವನು ಇಲ್ಲಿಗೇಕೆ ಬಂದ?... ಎಂಬ ಪ್ರಶ್ನೆ ಹಾಕಿಕೊಳ್ಳುವುದರೊಳಗಾಗಿ, ನಮ್ಮ ದೃಷ್ಟಿ ನನ್ನ ಜೇಬಿನ ಕಡೆಗೆ ಹೋಯಿತು. ಅದರಲ್ಲಿದ್ದ ನೂರರ ನೋಟು ನನ್ನನ್ನು ನೋಡಿ ನಕ್ಕಂತಾಯಿತು. ನನ್ನ ಸೆವೆಂತ್ ಸಂಶಯ ಸೆನ್ಸ್, ಇವನು ಲೋಕಾಯುಕ್ತ ದೇವರೇ... ಎಂದು ತಿವಿತಿವಿದು ಹೇಳಹತ್ತಿತ್ತು. ಆ ಕ್ಷಣವೇ ಬೆದರಿ ನಡುಗಹತ್ತಿದೆ. ನನ್ನ ಸ್ಥಿತಿ ನೋಡಿ, ಅವನು ಭೋಳೆ ಶಂಕರನಾದ.

''ಏನ್ ಭಾವ. ನಾನು ಸಂದೇಶ ಅಲ್ವೇ?'... ಎಂದು ಪುನಃ ಪರಿಚಯಿಸಿಕೊಂಡ. ಆ ಸ್ಥಿತಿ ನೋಡಿದ ನನ್ನವಳ ಹೊಟ್ಟೆ ಹಿಡಿಸದ ನಗೆ ಮಿಕ್ಸಿಯೊಳಗೆ, ನಾನು ನುಣ್ಣನ್ನ ಹೂರಣವಾಗಿದ್ದೆ.''

''ಛೇ... ಛೇ... ನಿಂದೊಂದು ತರಹದ ಕಷ್ಟ ಬಿಡು ಮಾರಾಯ''

''ಕಷ್ಟ ಅಂದ್ರೆ, ಅಂತಿಂಥದು ಅಲ್ಲ ಬಿಡಯ್ಯ. ಒಂದ್ಸಲ ಏನಾಯ್ತಂತೀಯ?''...

''ಅಲ್ಲೋ ನೀ ಅದೇನಂಥ ಹೇಳದೇ ಗುಟ್ಟಾಗಿಟ್ಕಂಡು ಏನಾಯ್ತು ಅಂತ ಕೇಳಿದರೆ ಹೇಗೆ?''...

''ಹೌದಲ್ವಾ? ಈಗ ಹೇಳ್ತೀನಿ ನೋಡು''... ಅಂದು ದುಡ್ಡಿಲ್ಲದ ಜೇಬಿಗೆ ಕೈ ಹಾಕಿ ತಡಕಾಡುವಂತೆ ಮಾಡಿ, ಒಂದ್ಸಲ ನನ್ನಾಕೆ ಪೇಟೆಗೆ ಹೊರಟಿದ್ದಳು. ನಾನು ವೈಸ್-ವರ್ಸಾ. ಎದುರಿಗೆ ಬಂದಾಕೆಯ ಮುಖದಲ್ಲಿ ಲವರ್ಸ್ ನಗೆ ಕುಣಿದಾಡುತ್ತಿತ್ತು. ಮೋಹಕವಾಗಿ ನಕ್ಕಳೋ ಅಥವಾ ಹಾಗೇ ಕಂಡಳೋ! ಕಂಡವಳು, ನಾಯಿ ಗೂಡಿನಲ್ಲಿ ಬೀಗದಕ್ಕೆ ಇಟ್ಟಿದೀನಿ ತಗೊಳ್ರಿ'... ಎಂದು ಉಲಿದಿದ್ದಳು. ಆಗ ಆಕೆಯ ಹಲ್ಲುಗಳು ಟ್ಯೂಬ್‌ಲೈಟುಗಳಂತೆ ಫಳಫಳ ಅಂದಿದ್ದವು. ನಾನು ಆ ಬೆಳಕಿನಲ್ಲಿ ಹಳೇ ಹುಣಸೇ ಹಣ್ಣು ಆಗಿ, ನಾಲ್ಕು ಹೆಜ್ಜೆ ಇಟ್ಟಿದ್ದೆನೋ ಇಲ್ಲವೋ. ಆಗ ನನಗೆ ಸಂಶಯದ ಬೀಜಗಳು ಮೊಳಕೆಯೊಡೆದವು. ಯಾರವಳು? ಆಕೆಯನ್ನು ಎಲ್ಲೋ ನೋಡಿದ ನೆನಪಿದೆಯಲ್ಲ. ಅದು ಹೋಗಲಿ ಎಂದರೂ, ಆಕೆಗೆ ನಮ್ಮ ಮನೆಯ ಬೀಗದ ಕೈ ಇಡುವ ಗುಪ್ತ ಸ್ಥಳ ಹೇಗೆ ತಿಳಿಯಿತು? ಎಂಬಿತ್ಯಾದಿ ಪ್ರಶ್ನೆಗಳ ಬಲೆಯಲ್ಲಿ ಬಿದ್ದು ಒದ್ದಾಡ ಹತ್ತಿದೆ. ಆ ಗೊಂದಲದ ಬಲೆ ಹರಿದದ್ದೇ ಮನೆ ತಲುಪಿದ ಮೇಲೆ.

'ಅಲ್ಲಯ್ಯಾ, ಮನೆಯಲ್ಲಿ ಇಪ್ಪತ್ನಾಲ್ಕು ಗಂಟೆ ಹೆಂಡತಿಯ your's faithfully ಆಗಿರುವಾಗ, ಅವರ ಗುರುತು'...

‘ಆ ಮರೆವಿಗಾಗಿ, ಆಕೆ ಮನೆಗೆ ಬಂದ ಮೇಲೆ, ಖಾಯಂ ಗುರುತು ಉಳಿಯುವಂತೆ ‘ಝಾಡಿಸಿ’ದ್ದಳು ಕಣಯ್ಯಾ’...

‘ಕತ್ತೆಯಂತೇನು?’ ನಗು ತಡೆಯದೆ ಕೇಳಿದೆ.

‘ಅಲ್ಲ ಅದರ ಮಾಲೀಕರಂತೆ. ಬಾಯಿಬಿಟ್ಟು ಹೇಳಿಸಿ, ನನ್ನ ಡಿಗ್ನಿಟಿ ಕಡಿಮೆ ಮಾಡುವ ಹುನ್ನಾರದ?’...

‘ಅದು ಹೋಗಲಿ. ಆದರೆ, ಇದಕ್ಕಿಂತ ಕೀಳಾದ ಘಟನೆ ಇನ್ನೊಂದು ಇರಲಿಕ್ಕಿಲ್ಲ ಬಿಡು’ ಅನ್ನುತ್ತಲೇ ಅಂದು ಅವನ ಹೆಂಡತಿಯಿಂದ ಝಾಡಿಸಿಕೊಂಡ ಸನ್ನಿವೇಶ ನೆನಪಿಗೆ ಬಂದು ಹೊಟ್ಟೆ ಹಿಡಿಸದಷ್ಟು ನಕ್ಕೆ.

ಆ ನಗುವಿನಲ್ಲಿ ನನ್ನನ್ನು ನಾ ಮರೆತಿದ್ದೆ. ಆದರೆ, ಸಿಂಗಳೀಕ ತಲೆ ಪರಚಿಕೊಂಡ. ಹಣೆ ತೀಡಿಕೊಂಡ. ತಟ್ಟಿ ತಡಕಾಡಿದ ಮೇಲೆ ಕೊನೆಗೆ ಬಾಯಿಬಿಟ್ಟ. ‘ವಡವು’ ಹೇಳುವಂತೆ ತಲೆ ಹಾಕಿದೆ.

‘ಒಂದು ಸಲ, ನಾನು ಮನೆಗೆ ಹೊರಟಿದ್ದೆ. ಸುಮಾರಾದ ಯುವಕರಿಬ್ಬರು ನನಗೆದುರಾಗಿ ಸಿಕ್ಕರು. ಮಂಗನಂತೆ ಹಲ್ಕಿರಿದು ಕಿಚಾಯಿಸಿದರು.

‘ನಮಸ್ಕಾರ ಸಾऽऽ... ನಾವು ನಿಮ್ಮ ಮನೆಗೆ ಹೋಗಿದ್ದೆವು. ನೀವು ಕಛೇರಿಗೆ ಹೋಗಿದ್ದೀರಿ ಅನ್ನುವುದು ಗೊತ್ತಾಯಿತು...’ ಆ ಮಾತುಗಳಿಂದ, ನಾನು ಕಂಪ್ಲೀಟ್ ಕನ್‌ಫ್ಯೂಜನ್ ಕೆಸರುಗದ್ದೆಗೆ ಬಿದ್ದಿದ್ದೆ. ಅವರು ಅಷ್ಟೊಂದು ಕರೆಕ್ಟಾಗಿ ನನ್ನ ಕಾ(ರ್ಯ) ರಸ್ಥಾನದ ಬಗ್ಗೆ ಹೇಳುತ್ತಿದ್ದಾರೆ. ಅಂಥವರಿಗೆ ನೀವು ಯಾರು?... ಅಂತ ಕೇಳಿದರೆ, ಅವರು ನನಗ್ಯಾವ ಸ್ಥಾನ ಕೊಟ್ಟಾರೆಂದು ಯೋಚಿಸುತ್ತಿರುವಾಗಲೇ, ಅಸಂಬದ್ಧ ಪ್ರಶ್ನೆಯೊಂದು ನುಸುಳಿತ್ತು.

‘ಊರಿಂದ ಯಾವಾಗ್ಬಂದ್ರಿ?... ಏನ್ಸಮಾಚಾರ? ಮನೆಯಲ್ಲಿ ಅಪ್ಪ-ಅಮ್ಮ, ಅಣ್ಣ - ತಂಗಿಯರೆಲ್ಲ ಆರಾಮಾ? ಎಂದು ಉಭಯ ಕುಶಲೋಪರಿಯನ್ನು ಕೇಳುವ ಮೂಲಕ, ಮರ್ಯಾದೆಯ ಕರಿ ಕಂಬಳಿಯನ್ನು ಹೊದ್ದುಕೊಂಡೆ. ಆ ಆಗಂತುಕರು ಅಂತಕನ ಶಿಷ್ಯರಂತೆ ಕಂಡರು. ಕಾಗೆಗಳು ಗುಟುಕು ಕೊಡುವಂತೆ ಮಾತಾಡಿಕೊಂಡರು. ಮರುಕ್ಷಣವೇ ಯುಗಳ ಗೀತೆಯಂತೆ ಇಬ್ಬರೂ,

‘ನಿಮ್ಮ ದಯೆಯಿಂದ ಎಲ್ಲರೂ ಆರೋಗ್ಯದಿಂದಿದ್ದಾರೆ ಸಾऽऽ... ನಮ್ಮಪ್ಪ ಅಮ್ಮ ನಿಮ್ಮನ್ನು ಬಹಳ ನೆನಸುತ್ತಿದ್ದಾರೆ ಸಾऽऽ’... ಎಂದದ್ದು, ನಾನು ಉದ್ದಿನ ಬೇಳೆ ಹೆಚ್ಚಿಗೆ ಹಾಕಿದ್ದ ಇಡ್ಲಿಯಂತಾಗಿದ್ದೆ.

‘ಈಗ, ಏನು ಬಂದಿದ್ದು?’

‘ಲಾಯರ್ ಹತ್ರ ಕೆಲಸವಿತ್ತು ಸಾऽ. ಅವರು ಬೆಳಿಗ್ಗೆ ಎಂಟು ಗಂಟೆಗೆ ಬರಲು ಹೇಳಿದ್ದಾರೆ ಸಾऽऽ. ಊರಿಗೆ ಒಂದೇ ಬಸ್ಸಿರಾದು. ಅದು ಆಗಲೇ ಹೊಂಟೋಗಿದೆ’....

‘ಹೌದಾ? ಪಾಪ! ಆಯ್ತು. ಇದೊಂದ್ ರಾತ್ರೀನ ನಮ್ಮ ಮನೇಲಿದ್ದು ಕಳೆಯಿರಿ’ ಅಂದು ಅಪರೂಪದ ದೇವಾಂಶ ಸಂಭೂತ ಅತಿಥಿಗಳನ್ನು ಮನೆಗೆ ಕರೆದೊಯ್ದೆ.’

ಅಂತಹ ಪರದೇಶಿ ಅತಿಥಿಗಳನ್ನು ನೋಡಿದ ಹೆಂಡತಿ, ಫಾರೆನ್ ಭಾಷೆಯಲ್ಲಿಯೇ ವಟಗುಟ್ಟಿದಳಾದರೂ, ರಾತ್ರಿ ಪರಲೋಕದಲ್ಲಿರುವ ಪಿತೃಪರಿವಾರ ತೃಪ್ತಿಯಾಗುವಂತೆ, ಶಾವಿಗೆ, ಬೋಂಡ, ಕೋಸುಂಬರಿ, ಹಪ್ಪಳ - ಸಂಡಿಗೆ, ಬಿಸಿ ಬಿಸಿ ಅನ್ನ, ಹುಳಿ, ಸಾಂಬಾರು ಮೇಲೆ ಫ್ರಿಜ್‌ನಲ್ಲಿಟ್ಟಿದ್ದ ಕೆನೆಮೊಸರನ್ನು ಸಾಕು ಮೇಡಂ ಸಾಕು. ಮಾ... ಥಂ ಅನ್ನುವವರೆಗೆ ಬಡಿಸಿದಳು. ತಿಂದು ತೇಗಿದ ಆ ದೇವರಿಗೆ ಗೊರಕೆಯ ಗಡದ್ದಾದ ನಿದ್ದೆಯಾಗದಿದ್ದರೆ ಹೇಗೆ?... ಅಂದುಕೊಂಡು, ಅವರಿಗಾಗಿ ಗರ್ಭಗುಡಿಯಂತಿದ್ದ, ಒಳಗಿನ ಸೋಫಿಸ್ಟಿಕೇಟೆಡ್ ಖಜಾನೆ ಬೆಡ್‌ರೂಮ್‌ನ್ನು ಸ್ವಚ್ಛಗೊಳಿಸಿದೆ. ಜಿಪುಣತನದಿಂದ ಬಿಚ್ಚದೇ ಬಚ್ಚಿಟ್ಟಿದ್ದ ಎರಡು ಟಗರು ಮಾರ್ಕಿನ ಉಣ್ಣೆ ರಗ್ಗುಗಳನ್ನು ಹೊದೆಯಲು ಕೊಟ್ಟು; ಸೊಳ್ಳೆ ಪರದೆ ಕಟ್ಟಿ, ರಾತ್ರಿಯಲ್ಲಿಗುಡ್ ಗುಡ್ ನೈಟಾಗಿರಲೆಂದು, ಗುಡ್‌ನೈಟ್ ಸೊಳ್ಳೆ ಬತ್ತಿ ಹಚ್ಚಿ, ಗುಡ್ ನೈಟ್ ಹೇಳಿ ಬಂದಿದ್ದೆ. ಇನ್ನೊಂದು ರೂಮಿನಲ್ಲಿ ನಾನು ಮಗ್ಗುಲ ಹಚ್ಚಿದ್ದೊಂದೇ ಗೊತ್ತು.'''

'ಆಮೇಲೇನಾಯ್ತು? ಸಿಹಿಗನಸು ಬಿದ್ದಿದ್ವಾ?... ಇಲ್ಲ ದೇವರೊಂದಿಗೆ ಸಂಭಾಷಿಸಿದೆಯಾ?'...

'ಇಲ್ಲಿ ಕೇಳು. ಆಮೇಲೇನಾಗಬೇಕಾಗಿತ್ತೋ ಅದೇ ಆಗಿತ್ತು. ಭರ್ಜರಿ ಊಟದಿಂದಾಗಿ, ಭರ್ಜರಿ ಗೊರಕೆಗಳೇ ಉತ್ಪತ್ತಿಯಾಗದಿರುತ್ತವೆಯೇ? ಬೀಜದಂತೆ ಬೆಳೆ. ಆ ಸದ್ದಿಗೆ ಆ ಇಡೀ ರೂಮೇ ಪ್ರತಿಧ್ವನಿಸಿತ್ತು. ಆ ಗೊರಕೆಗಳ ಗೋಡೌನ್ ಖಾಲಿಯಾದುದೇ ಬೆಳಗಿನ ಜಾವದ ಮಾಮೂಲಿ ಹೊತ್ತಿಗೆ. ಎಂದಿನಂತೆ, ನನ್ನಾಕೆಗಿಂತ ನಾನೇ ಮೊದಲೆದ್ದಿದ್ದೆ. ನನ್ನ ಪಾಲಿನ ಮನೆಗೆಲಸ ಮುಗಿಸುವುದು ಆ ದೇವರುಗಳಿಗೆ ಗೊತ್ತಾಗಬಾರದೆಂದು ಬೆಕ್ಕಿನ ನಡಿಗೆಯಲ್ಲಿ ಮುಂದಾದೆ. ಕರಾಗ್ರೆ ವಸತಿ ಅಲ್ಲ ಮುಖ ಭೇಟಿಗಾಗಿ ಆ ರೂಮಿನ ಒಳಗೆ ಇಣುಕಿದೆ.'

'ಆ ನಿನ್ನ ದೇವರು ಏನು ಮಾಡುತ್ತಿದ್ದರು? ಬೀಡಿ - ಸಿಗರೇಟು ಸೇದುತ್ತಿದ್ದರೆ? ಇಲ್ಲ ಹಳ್ಳಿಯ ಸಮಾಚಾರ ಮಾತಾಡುತ್ತಿದ್ದರೇ?'... ವಿಷಾದದ ನಗೆ ನಕ್ಕ ಸಿಂಗಳೀಕ.

'ಇಲ್ಲ, ಆ ದೇವರು ಜಡ ದೇಹಗಳೊಂದಿಗೆ ಅಂತರ್ಧಾನರಾಗಿದ್ದರು. ಚರ್ಮ ಸುಲಿದ ಸತ್ತ ದನಗಳಂತೆ, ಎರಡು ಖಾಲಿ ಬೆಡ್‌ಗಳನ್ನು ಬಿಟ್ಟು, ಉಳಿದೆಲ್ಲ ಬೆಡ್ ಪರಿಕರಗಳಿಗೂ ಮುಕ್ತಿ ದೊರಕಿಸಿದ್ದರು. ಹೂವಿನೊಂದಿಗೆ ನಾರೂ ಸ್ವರ್ಗ ಸೇರುವಂತೆ ಮಾಡಿದ್ದರು. ಏಕೋ ಭಯವಾಯಿತು. ಅಂತಹ ದೇವಾಂಶ ಸಂಭೂತರು ಬೆಳಿಗ್ಗೆ ಇರುವ ಜಾಗಗಳಾದ ಬಾಥ್‌ರೂಮ್, ಲ್ಯಾವೆಟ್ರಿ ಎಲ್ಲಾ ಹುಡುಕಿದೆ. ಅಲ್ಲೂ ಅವರ ಯಾವ ಅವಶೇಷಗಳಿರಲಿಲ್ಲ. ಅಲ್ಮೀರಾದಲ್ಲಿ ಬಚ್ಚಿಟ್ಟುಕೊಂಡಿರಬಹುದೇ... ಎಂದು ಅಲ್ಮೀರಾದ ಬಾಗಿಲು ತೆರೆದೆ. ಇನ್ನೂ ಆಶ್ಚರ್ಯ ಕಾದಿತ್ತು. ಅಲ್ಮೀರಾದಲ್ಲಿದ್ದ ಎಲ್ಲ ಬಟ್ಟೆ ದೋಚಿ ಬೆತ್ತಲೆ ಮಾಡಿಟ್ಟಿದ್ದರು. ಇಂಟರ್‌ಲಾಕ್ ತೆರೆದೆ. ಹಲ್ಲಿಲ್ಲದ ಮುದುಕರ ಬಾಯಾಗಿತ್ತದು. ಗುಲಗಂಜಿಯಷ್ಟು ಬೆಳ್ಳಿ - ಬಂಗಾರ ಬಿಟ್ಟಿರಲಿಲ್ಲ. ನನ್ನ ಹಾಳು 'ಮೆಮರಿ'ಯ ಬಗ್ಗೆ ಜಿಗುಪ್ಸೆ ಬಂದು, ಅರಿವಿಲ್ಲದಂತೆ, ಅಲ್ಮೀರಾದ ಕದವನ್ನು 'ಧಡಾರ್' ಅಂತ ಮುಚ್ಚಿದ್ದೆ. ಆ ಸದ್ದಿಗೆ,


ಕಳ್ಳರು ಬಂದಿರಬೇಕೆಂದು ಸನ್ನಾಕೆ ನಿದ್ದೆಗಣ್ಣಲ್ಲೇ ಲಾಟಿ ಹಿಡಿದು ನಾನಿದ್ದಲ್ಲಿಗೆ ಬಂದಿದ್ದಳು. ಕಣ್ಣುಬಿಟ್ಟ ಅವಳಿಗೆ ವಿಷಯವೆಲ್ಲ ತಿಳಿದು ಹೋಯಿತು. ಲಬೋ... ಲಬೋ... ಅಂದಳು. ಅಕ್ಕ-ಪಕ್ಕದವರು ಬಂದರು. ನನ್ನ ಮತ್ತು ಅಪರಿಚಿತ ದೇವರುಗಳ ಕಥೆಯೆಲ್ಲ ಕೇಳಿಸಿಕೊಂಡಾದ ಮೇಲೆ ನನ್ನ ಕಮಂಗಿತನಕ್ಕೆ ಬಿದ್ದು ಬಿದ್ದು ನಕ್ಕರು. ಮೇಲೆ ಒಂದೆರಡು ನ್ಯಾಪ್‌ಕಿನ್‌ಗಳು ನೆನೆಯುವಷ್ಟು ನನ್ನ ಮುಖಕ್ಕೆ ಉಗಿದೂ ಹೋದರು...'

'ಅಂದ್ರೆ, ಗಂಡ ಸತ್ತಮೇಲೆ ಹೆಂಡತಿಗೆ ಬುದ್ಧಿ ಬಂದಂತಾಗಿದೆಯೆನ್ನು...'

'ಹೌದು ಮಾರಾಯ, ಅಂದಿನಿಂದ ರಸ್ತೆಯಲ್ಲಿ ಯಾರ ಮುಖವನ್ನೂ ನೋಡುವುದಿಲ್ಲ. ಯಾರನ್ನೂ ಮಾತಾಡಿಸುವುದಿಲ್ಲ. ಸುಮ್ಮನೇ ತಲೆ ತಗ್ಗಿಸಿ ಓಡಾಡಿಕೊಂಡಿರುವೆ...'' ಅಂದು ನಿಃಶಬ್ದನಾದ. ಅವನಲ್ಲಿ ವಿಷಾದ ಮಡುಗಟ್ಟಿತ್ತು.

ಪಾಪ! ಅವನು ಮತ್ತಂಥವರ poor memoryಗಾಗಿ ಒಳಗೊಳಗೆ ಮರುಕಪಟ್ಟೆ. ಆದರೆ, ಅವನ ಆ ಒಂದೊಂದು ಘಟನಾವಳಿಗಳು ಗಂಟಲಿಗೆ ಬಂದು ಜೋರಾಗಿ ನಗುವಂತೆ ಮಾಡಿದವು, ಆ ತಕ್ಷಣ ಅವನು,

ಈ ದನಿಯನ್ನು ಎಲ್ಲೋ ಕೇಳಿರುವೆನಲ್ಲ. ಈ ಫಿಗರನ್ನು ಎಲ್ಲೋ ನೋಡಿರುವೆನಲ್ಲ ಎನ್ನುತ್ತ, ತಲೆಯ ಮೇಲೆ ಕೈಯಾಡಿಸಿಕೊಳ್ಳಹತ್ತಿದ. ಇನ್ನು ಇಲ್ಲಿ ನಿಂತಷ್ಟೂ ಅಪಾಯಕಾರಿಯೆಂದುಕೊಂಡು ಅವಸರದಿಂದ ಜಾಗ ಖಾಲಿ ಮಾಡಿದೆ, ನೀವು?



ಕಾಲ್ಚೆಂಡಿನಾಟ – ಸೊಳ್ಳೆಗಳ ಕಾಟ

– ಧೃತಿ

ಕಾಲ್ಚೆಂಡಿನಾಟಕ್ಕೂ, ಸೊಳ್ಳೆ ಕಾಟಕ್ಕೂ 'ಎತ್ತಣಿಂದೆತ್ತ ಸಂಬಂಧವಯ್ಯ' ಅಂತ ಗೊಣಗಬೇಡಿ. ಹದಿಹರೆಯದ ಹುಡುಗರಿಬ್ಬರ ಮಾತುಕತೆ ಕೇಳಿದ ಮೇಲೆ ಅವರ ಕಲ್ಪನಾಶಕ್ತಿ ಎಂತೆಂತಹ ಸಂಬಂಧವನ್ನು ಸೃಷ್ಟಿಸಬಲ್ಲದು ಎಂದು ನನಗೂ ಸೋಜಿಗವಾಯಿತು. ಮಾಟೆರಾಜಿ ಎನ್ನುವ ಫುಟ್ಬಾಲ್ ಆಟಗಾರ; ತನ್ನ ಹೆಸರಿನ ಉತ್ತರಾರ್ಧದ ಪದದ ಅರ್ಥಕ್ಕೆ ಅನುಗುಣವಾಗಿ, ಜಿಡಾನೆ (ಜಿದ್ದು+ಆನೆ) ಎನ್ನುವ ಫುಟ್ಬಾಲ್ ಆಟಗಾರನೊಂದಿಗೆ ಉಂಟಾಗಿದ್ದ ಜಿದ್ದಿನ ಮನಸ್ತಾಪವನ್ನು ಮರೆತು ರಾಜಿ ಮಾಡಿಕೊಳ್ಳುವ ಪ್ರಸ್ತಾಪ ಮಾಡಿದ ಸುದ್ದಿ ಕೆಲ ದಿನಗಳ ಹಿಂದೆ ವೃತ್ತ ಪತ್ರಿಕೆಗಳಲ್ಲಿ ವರದಿಯಾಗಿತ್ತಷ್ಟೆ. ಅದನ್ನು ಓದಿದ ಫುಟ್ಬಾಲ್ ಪ್ರಿಯರಾದ ಹದಿಹರೆಯದ ಹುಡುಗರಿಬ್ಬರು ಎಂದೋ ಮುಗಿದುಹೋದ ವಿಶ್ವಕಪ್ ಪಂದ್ಯಾವಳಿಯ ಘಟನೆಗಳ ಸಿಂಹಾವಲೋಕನ ಮಾಡಿಕೊಳ್ಳುತ್ತಾ, ವಿಮರ್ಶಿಸುತ್ತಾ ಕುಳಿತಿದ್ದರು. ಆಗ ನಾಲ್ಕೈದು ಸೊಳ್ಳೆಗಳ ದಂಡು ಒಂದರ ಹಿಂದೊಂದು ಏರೋಬ್ಯಾಟಿಕ್ ವಿಮಾನಗಳಂತೆ ಅತ್ತಿಂದಿತ್ತ ಲಾಗಾ ಹಾಕುತ್ತಾ ಕಣ್ಣಮುಂದೆ ಹರಿದಾಡುತ್ತಿರುವುದನ್ನು ಕಂಡು ಸುನೀಲನೆಂಬ ಹುಡುಗ ಹೇಳಿದ. ''ನಂಗಂತೂ ಈ ಸೊಳ್ಳೆಗಳನ್ನು ಹೊಡೆದೂ ಹೊಡೆದೂ ಸಾಕಾಯ್ತು ಕಣೋ; ಹಾಳಾದವು; ಒಂದಾದರೂ ಕೈಗೆ ಸಿಗಬೇಕಲ್ಲ. ಫುಟ್‌ಬಾಲ್ ಆಟದಲ್ಲಿ ಗೋಲ್ ಹೊಡೆಯೋವಷ್ಟೆ ಕಷ್ಟ ಇವನ್ನ ಹೊಡೆಯೋದು. ಇನ್ನೇನು ಕಟ್ಟಿರುವ ನೆಟ್ ಒಳಗೆ ಫುಟ್‌ಬಾಲ್ ಹೋಗೇಬಿಡುತ್ತೆ; ಗೋಲ್ ಆಗೇಬಿಡುತ್ತೆ ಎನ್ನುವಷ್ಟರಲ್ಲೇ ಗೋಲ್ ಕೀಪರ್‌ನ ದೆಸೆಯಿಂದಲೋ ಅಥವಾ ಆಟಗಾರನ ಗುರಿ ತಪ್ಪಾಗಿದ್ದರಿಂದಲೋ ಚೆಂಡು ಬೇರೆಡೆ ಹೊರಳಿಬಿಡುತ್ತಲ್ಲ; ಅದೇ ರೀತಿ ಸೊಳ್ಳೆಗಳು ಕೂಡಾ! ಇನ್ನೇನು ಚಾಚಿದ ಎರಡು ಕೈಗಳ ನಡುವೆ ಸಿಕ್ಕೇಬಿಟ್ಟಿದೆ ಎಂದುಕೊಂಡು ನೋಡಿದರೆ ಸಿಗೋದೇನು! ನಮ್ಮದೇ ಎರಡು ಅಂಗೈಗಳಿಗೆ ರಪ್ ಅಂತಲೋ ಫಟಾರ್ ಅಂತಲೋ ಒಂದೆರಡು ಏಟು ಅಷ್ಟೆ.''

ಸುನೀಲನ ಫುಟ್‌ಬಾಲ್ ಪ್ರೀತಿ ಎಷ್ಟಿತ್ತೆಂದರೆ ಸೊಳ್ಳೇ ಹೊಡೆಯೋದಕ್ಕೂ ಅವನು ಫುಟ್‌ಬಾಲ್ ಆಟವನ್ನೇ ಸಮೀಕರಿಸಿ ಹೇಳಿದ್ದ. ಅವನ ಮಾತನ್ನು ಕೇಳುತ್ತಿದ್ದ ಕಿರಣ್‌ಗೆ ನಗುಬಂತು. ''ಇದೆಂತಹ ಹೋಲಿಕೆನೋ ನಿನ್ನದು?'' ಎಂದ.

''ಇನ್ನೇನ್ರತ್ತೆ; ಬೀಸೋಗಾಳಿ ಸೊಳ್ಳೇನ ದೂಡಿಕೊಂಡು ಬರುತ್ತೆ, ಫುಟ್‌ಬಾಲ್ ಗುಂಡಗೆ ಉರುಳುತ್ತಾ ಹೋಗುವ ರೀತಿಯಲ್ಲಿ ಹಗುರವಾದ ರೆಕ್ಕೆಗಳು ಅದನ್ನು ಹಾರಿಸುತ್ತಾ ಬರುತ್ವೆ. ಒಂದೇ ವ್ಯತ್ಯಾಸವೆಂದರೆ''... ಮುಂದೇನು ಹೇಳಬೇಕೋ ಹೊಳೆಯದೆ ಸುನೀಲ್ ತಲೆ ತುರಿಸಿಕೊಂಡ. ಅನಂತರ ಸ್ವಲ್ಪ ಯೋಚಿಸಿ ಹೇಳಿದ.

''ಒಂದೇ ವ್ಯತ್ಯಾಸವೆಂದರೆ ಫುಟ್‌ಬಾಲ್ ಆಟದಲ್ಲಿ ಎರಡೂ ಪಕ್ಷದವರು ಪರಸ್ಪರ ವಿರುದ್ಧವಾದ ಬಲೆ (ನೆಟ್) ಯೊಳಗೆ ಚೆಂಡು ತೂರಿಸಬೇಕು. ಅನಂತರ ಗೋಲಿನ

ಸಂಖ್ಯೆಗೆ ಅನುಸಾರವಾಗಿ ಸೋಲು ಗೆಲುವು ನಿರ್ಧರಿಸಬೇಕು. ಆದರೆ ಇಲ್ಲಿ ಹಾಗಲ್ಲ. ಎಡ-ಬಲ ಅಂಗೈಗಳೆಂಬ ನೆಟ್‌ನ ನಡುವೆ ಸೊಳ್ಳೆ ಸಿಕ್ಕಿ ಅಪ್ಪಚ್ಚಿಯಾದರೆ ನಮಗೆ ಗೋಲು ಸಿಕ್ಕಿದಂತೆ. ನೆಟ್‌ನೊಳಗೆ ಸಿಕ್ಕದೆ ನುಣುಚಿಕೊಂಡು ನಮ್ಮ ರಕ್ತ ಹೀರಿದರೆ ಸೊಳ್ಳೆ ಎಂಬ ಎದುರಾಳಿಗೇ ಪಾಯಿಂಟ್ ಅಂತ.''

''ಇದೆಂಥ' ಆಟನೋ ನಿನ್ನದು?''

''ಇನ್ನೇನ್ಮತ್ತೆ; ನೋಡ್ತಾನೇ ಇದೀನಿ; ಸೊಳ್ಳೆಗಳನ್ನು ಹೊಡೀತಾನೇ ಇದೀನಿ; ಒಂದಾದ್ರೂ ಕೈಗೆ ಸಿಗುತ್ತಾ ನೋಡು''

''ಅವುಗಳನ್ಯಾಕೆ ಆಟಕ್ಕೆ ಕರೆದೆ? - ಕಿರಣ್ ನಗುತ್ತಾ ಕೇಳಿದ.

''ನಾನೆಲ್ಲಿ ಕರೆದೆ? ಇವುಗಳ ಜೊತೆ ಆಡೋದೇನೂ ಬೇಡ; ಚಿಕನ್ ಗುನ್ಯಾ, ಮಲೇರಿಯಾ ಅಂತೆಲ್ಲಾ ರೋಗಗಳನ್ನ ಕಟ್ಕೊಂಡು ಹೆಣಗೋದು ಏಕೆ ಅಂತ ನಮ್ಮಪ್ಪ ಕಿಟಕಿಗಳಿಗೆಲ್ಲಾ ನೆಟ್‌ಲಾನ್ ಹಾಕಿಸಿದಾರೆ. ಆದ್ರೂ ಅವುಗಳ ಧಾಳಿ ತಪ್ಪಲಿಲ್ಲ. ನಮ್ಮನ್ನ ಓಡಿಸೋಕೆ ಬರಿಯ ಕಾಲೊಂದೇ ಏಕೆ ಮೈಕೈ ಎಲ್ಲಾ ಕೆರ್ಕೊಂಡೇ ಜಗಳಕ್ಕೆ ಬನ್ನಿ ಅನ್ನುತ್ವೆ.''

ಕಿರಣ್ ಬಿದ್ದು ಬಿದ್ದು ನಗುತ್ತಲೇ ಕೇಳಿದ. ''ನೆಟ್‌ಲಾನ್ ಇದ್ದರೂ ಅದ್ಹೇಗೆ ಇಷ್ಟೊಂದು ಸೊಳ್ಳೆ ಒಳಗೆ ಬಂದವೊ?''

''ಅಯ್ಯೋ ಪೆದ್ದೆ! ಕಿಟಕಿಗೆ ನೆಟ್ ಹಾಕ್ಸಿದ್ರೂ ಬಾಗಿಲು ತೆರೆಯದೆ ಇರೋಕಾಗುತ್ತಾ! ಬಾಗಿಲಲ್ಲೇ ಹೊಂಚು ಹಾಕುತ್ತಿರ್ತಾವೆ. ಬಾಗಿಲು ತೆರೆದ ಕೂಡಲೇ ಒಳನುಗ್ಗಿಬಿಡುತ್ವೆ. ಆಮೇಲಿನ್ನೇನು! ಕಿಟಕಿಯಿಂದ ಹೊರ ಹೋಗುವಂತೆಯೂ ಇಲ್ಲ. ಒಳಗೆ ಇದ್ದು ಸಿಕ್ಕವರನ್ನು ಕಚ್ಚಿ ಕಚ್ಚಿ ರಕ್ತ ಹೀರತ್ವೆ. ಅಂತೂ ಒಳ್ಳೇ ಸೊಳ್ಳೆ ಕಾಟಾನಪ್ಪ!''

ಮಾತಾಡುತ್ತಾ ಮಾತಾಡುತ್ತಾ ತನ್ನ ಸುತ್ತಮುತ್ತ ನಾಲ್ಕೈದು ಸೊಳ್ಳೆಗಳು ದಾಂಗುಡಿಯಿಡುತ್ತಿದ್ದುದನ್ನೇ ಗಮನಿಸುತ್ತಿದ್ದ ಸುನೀಲನೆಂದ. ''ನೋಡೋ ಕಿರಣ್; ಇವುಗಳನ್ನೆಲ್ಲಾ ಇವತ್ತು ಅಪ್ಪಚ್ಚಿ ಮಾಡಿದರೆ ನನಗೆ ಎಷ್ಟು ಸಮಾಧಾನವಾಗುತ್ತೆ ಗೊತ್ತಾ; ಜರ್ಮನಿ ತಂಡದವರು ಸೆಮಿಫೈನಲ್‌ನಲ್ಲಿ ಪೆನಾಲ್ಟಿ ಶೂಟ್ ಔಟ್‌ನಲ್ಲಿ ನಾಲ್ಕೈದು ಗೋಲು ಗಳಿಸಿದರಲ್ಲ; ಆಗ ಅವರಿಗಾದಷ್ಟೇ ಸಂತೋಷ ನನಗೂ ಆಗುತ್ತೆ.'' ಹಾಗೆ ಹೇಳುತ್ತಾ ಹೇಳುತ್ತಾ ದೇಹವನ್ನು ಮುಂದೆ ಬಾಗಿಸಿ ಸುನೀಲ ಎರಡೂ ಅಂಗೈಗಳಿಂದ ಜೋರಾಗಿ ಸೊಳ್ಳೆಯ ಮೇಲೆ ಪ್ರಹಾರ ಮಾಡಲುದ್ಯುಕ್ತನಾದ. ದೇಹದ ಆಯತಪ್ಪಿ ತಲೆಯನ್ನು ಗೋಡೆಗೆ ಜೋರಾಗಿ ಗಟ್ಟಿಸಿಕೊಂಡ.

'ಹಾಯ್' ಎನ್ನುತ್ತಾ ತಲೆಯನ್ನು ಒತ್ತಿಕೊಂಡ.

''ಮೆಲ್ಲಗೆ ಕಣೋ ಸುನೀಲ. ನೀನು ಗೂಳಿಯ ಹಾಗೆ ಮುನ್ನುಗ್ಗಿ ಗೋಡೆಗೆ ತಲೆಗಟ್ಟಿಸ್ಕೋಬೇಡ. ನಿನ್ನ ಹೊಡೆತಕ್ಕೆ ಸಿಕ್ಕಿ ಕೆಳಗೆ ಬೀಳೋಕೆ ಗೋಡೆಯೇನೂ ಮಾಟರಾಜೆಯಲ್ಲ, ನಿನ್ನ ತಲೆ ಜಿಡಾನೆ ತಲೆಯೂ ಅಲ್ಲ. ಗೋಡೆ ತಿರುಗಿಬಿದ್ದು ನಿನ್ನ ತಲೆಯನ್ನೇ ಗಟ್ಟಿಸುತ್ತೆ.''

''ಅದ್ಸರಿ. ಅವತ್ತು ಫುಟ್ಬಾಲ್ ಫೈನಲ್ಸ್ ನೋಡೋವರೆಗೂ ನನಗೆ ಪೆನಾಲ್ಟಿ ಕಿಕ್ ಒಂದೇ ಗೊತ್ತಿದ್ದುದು. ಅನಂತರ ಗೊತ್ತಾಯ್ತು ಜಿಡಾನೆ ತೋರಿಸಿದ್ದೂ ಒಂಥರಾ ಕಿಕ್ ಅಂತ. ಅದು ಬುಲ್ ಕಿಕ್ಕೊ, ಟಗರು ಕಿಕ್ಕೊ ಅಥವಾ ಇನ್ಯಾವ ಕಿಕ್ಕೊ?'' ಸುನೀಲನೆಂದ.

''ಅದೇನೋ ನಂಗೆ ಗೊತ್ತಿಲ್ಲಪ್ಪ 'ಸೊಳ್ಳೆ ಕಿಕ್' ಅಂತೂ ಅಲ್ಲ. ಕೋಪ ಯಾವ ಪ್ರಾಣಿಗೆ ಜಾಸ್ತಿ ಎನ್ನುವುದರ ಮೇಲೆ ಅದನ್ನು ನಿರ್ಧರಿಸ್ಬೇಕು. ಈಗ ನಮ್ಮಕ್ಕನ ಒಂದೂವರೆ ವರ್ಷದ ಮಗು ಇದೆಯಲ್ಲ; ಅದು ತನಗೆ ಸಕ್ಕರೆ ಕೊಡಲಿಲ್ಲ ಅಂತಲೋ ಅಥವಾ ಅದು ಕೇಳಿದ ವಸ್ತು ಸಿಗಲಿಲ್ಲ ಅಂತಲೋ ಕೋಪ ಮಾಡ್ಕೊಂಡು ತನ್ನ ತಲೆಯನ್ನ ಅವಳ ಕೆನ್ನೆಗೋ ಭುಜಕ್ಕೋ ಗುದ್ದುತ್ತಾ ಇರತ್ತೆ. ಆಗೆಲ್ಲಾ ನಂಗೆ ಜಿಡಾನೆಯದೇ ನೆನಪು.''

''ಮಗು ಗುದ್ದೋದು ನೋಡೋಕೇನು ಚೆನ್ನ; ಜಿಡಾನೆ ಗುದ್ದಿದ್ನಲ್ಲ, ಹಾಗೆ ಗುದ್ದಿದರೆ ಅದೊಂದು ಮೋಜು. ಅದಕ್ಕೇ ಅಲ್ವಾ. ಜಿಡಾನೆ ಮಾಟರಾಜಿಗೆ ಗುದ್ದಿದ್ದನ್ನೇ ಕಂಪ್ಯೂಟರ್ ಆಟದಲ್ಲಿ ಆಡುತ್ತಾ ಜನ ಬಿದ್ದು ಬಿದ್ದು ನಗ್ತಾ ಇದ್ದುದು. ಹಾಗಂತ ನಾನು ಪೇಪರ್‌ನಲ್ಲಿ ಓದಿದೆ'' ನಗುತ್ತಾ ಸುನೀಲನೆಂದ

''ಹೌದು; ಹೌದು; ನಾನೂ ಓದಿದ್ದೆ'' ಎನ್ನುತ್ತಾ ಸುನೀಲನ ಜೊತೆ ಕಿರಣನೂ ನಕ್ಕ ಜನ ಹೇಗೆ ಬಿದ್ದು ಬಿದ್ದು ನಕ್ಕರು ಎಂಬುದನ್ನು ಊಹಿಸಿಕೊಳ್ಳುತ್ತಾ.

ಸರ್ಜನ್ ಉವಾಚ

ಒಂದು ಗರಾಜು. ಮೆಕ್ಯಾನಿಕ್ ಎಂದಿನಂತೆ ಕಾರೊಂದರ ಸಿಲಿಂಡರ್‌ಗಳನ್ನು ಹೊರತೆಗೆದು ರಿಪೇರಿ ಮಾಡುತ್ತಿದ್ದ. ಆಗ ಅಲ್ಲಿಗೆ ಬಂದ ಖ್ಯಾತ ಹೃದಯ ಸರ್ಜನ್ ಇವನ ಕಣ್ಣಿಗೆ ಬಿದ್ದರು. ಅವರು ತಮ್ಮ ಕಾರನ್ನು ರಿಪೇರಿಗೆ ತಂದಿದ್ದರು.

ಹಲೋ ಡಾಕ್ಟರ್ ಇಲ್ಲಿ ಬನ್ನಿ ಒಂದು ನಿಮಿಷ ಎಂದು ಮೆಕ್ಯಾನಿಕ್ ಕರೆದಾಗ ಚಕಿತರಾದ ಡಾಕ್ಟರ್ ಅವನ ಬಳಿ ನಡೆದರು. ಮಲಿನಗೊಂಡ ತನ್ನ ಕೈಗಳನ್ನು ಚಿಂದಿ ಬಟ್ಟೆಗೆ ಒರೆಸಿದ ಮೆಕ್ಯಾನಿಕ್ ನೋಡಿ ಡಾಕ್ಟರ್, ನಾನು ವಾಹನಗಳ ಹೃದಯವನ್ನು ಬಗೆದು, ವಾಲ್ವ್‌ಗಳನ್ನು ಹೊರತೆಗೆದು ಕ್ಲೀನ್ ಮಾಡುತ್ತೇನೆ. ಹೊಸ ಭಾಗಗಳನ್ನು ಜೋಡಿಸುತ್ತೇನೆ. ಅದು ಹೊಸದಾಗಿರುವಂತೆ ಮಾಡುತ್ತೇನೆ. ನೀವು ಮಾಡುವಂತೆಯೇ. ಆದರೆ ನಿಮಗೇಕೆ ಸಾವಿರಗಟ್ಟಲೆ ದುಡ್ಡು ಕೊಡುತ್ತಾರೆ? ಎಂದು ಕೇಳಿದ.

ಇಂಜಿನ್ ಚಾಲೂ ಇದ್ದಾಗ ನೀನು ಆ ಕೆಲಸ ಮಾಡಬಲ್ಲೆಯಾ? ಎಂದು ಸರ್ಜನ್ ಕೇಳಿದರು.

ಮೆಕ್ಯಾನಿಕ್‌ಗೆ ಉತ್ತರ ಸಿಕ್ಕಿತ್ತು.

(ಇಂಟರ್‌ನೆಟ್‌ನಿಂದ)

ವಿದ್ಯಮಾನಗಳು

- ಕು.ಶ.

ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು ಎಂದು ಕವಿಯ ಬಯಕೆ ಸಾಕಾರವಾಗಿ ಐವತ್ತು ವರ್ಷಗಳು ಮುಗಿದಿದೆ. ಈಗ ಎಲ್ಲೆಲ್ಲೂ ಸುವರ್ಣದ ಸಂಭ್ರಮ. ನಾಡಿನ ನಾಲ್ಕೂ ಮೂಲೆಗಳಿಂದ ಹೊರಟಿದ್ದ ಸಾಂಸ್ಕೃತಿಕ ದಿಬ್ಬಣಗಳು ಕಲ್ಯಾಣನಗರಿಯನ್ನು ಸೇರಿವೆ. ವಿಧಾನಸೌಧದ ಮುಂದೆ ಜಾನಪದಜಾತ್ರೆಗಳು ನಡೆಯುತ್ತಿವೆ. ಮೊದಲ ಜಾತ್ರೆಗೆ ಸಾಕ್ಷಾತ್ ಮುಖ್ಯಮಂತ್ರಿಗಳೇ ಸಪರಿವಾರ ಸಮೇತ ಎತ್ತಿನಗಾಡಿಗಳಲ್ಲಿ ಬಂದಿದ್ದಾರೆ. ನಾಡಿನ ಎಲ್ಲಾ ಕಡೆಗಳಿಂದ ಬಂದ ಜಾನಪದ ಕಲಾವಿದರು ಕುಣಿದು ಕುಪ್ಪಳಿಸುತ್ತಿದ್ದಾರೆ. ಆದರೆ ಇಲ್ಲಿ ಬೆಂಗಳೂರು ನಾಗರಿಕರಿಂದ ಮಣ್ಣಿಗೆ ಹತ್ತಿರದ ಅಸಲಿ ಜಾನಪದ ಹಾಡು-ನೃತ್ಯಗಳ ಬಗೆಗೆ ಉದಾಸೀನವಾದರೆ ಥಳುಕು ಬಳುಕಿನ ಸಿನಿಮೀಯ ಕಲಾವಿದರ ನಕಲಿ ಜಾನಪದ ನೃತ್ಯಗಳಿಗೆ ಸಿಳ್ಳುಗಳ, ಒನ್ಸ್ ಮೋರ್‌ಗಳ ಅತ್ಯುತ್ಸಾಹದ ಮೆಚ್ಚುಗೆಯಂತೆ. ರಾಷ್ಟ್ರಕವಿ, (ತಮಿಳಿನಲ್ಲಿ ಅರಸು ಕವಿ) ಬೇಕೇ ಬೇಡವೇ ಚರ್ಚೆಮುಗಿದು ಅತ್ಯಂತ ಸೂಕ್ತರ ಆಯ್ಕೆ ಮುಗಿದಿದೆ. ಹಳೆಯ ಪುಸ್ತಕಗಳ ಮರುಮುದ್ರಣ ನಡೆದಿದೆ. ಏಕೀಕರಣದ ವಿಶೇಷ ಪ್ರಶಸ್ತಿಗಳ, ಮಾಮೂಲಿ ರಾಜ್ಯೋತ್ಸವ ಪ್ರಶಸ್ತಿಗಳ ವಿತರಣೆಯಾಗಿದೆ. ಸುವರ್ಣ ಕರ್ನಾಟಕ ಹೊಸದಾಗಿ ಪಾಲೀಶ್ ಮಾಡಿರುವ ಚಿನ್ನದಂತೆ ಫಳಫಳ ಹೊಳೆಯುತ್ತಿದೆ. ಕರ್ನಾಟಕ is shining.

★★★

ಕರ್ನಾಟಕದ ಜನ 1956ರಲ್ಲಿ ಹೇಗಿದ್ದರು? ಈಗ ಹೇಗಿದ್ದಾರೆ? ಹೋಲಿಕೆಗೆ ಐವತ್ತು ವರ್ಷ ದೀರ್ಘಾವಧಿ. ಹತ್ತು ವರ್ಷಗಳಲ್ಲಿ ಎಷ್ಟು ಬದಲಾವಣೆಯಾಗಿದೆ? ಹಿಂದೆ ಮಾನವಮಿ ಹಬ್ಬದಲ್ಲಿ ಬಾಲಕರು ಮನೆಮನೆಗೆ ಬಂದು ಧನಕನಕ ವಸ್ತುವಾಹನವಾಗಲೆಂದು ಲೇಸಾಗಿ ಹರಸುತ್ತಿದ್ದರಂತೆ. ಈ ಹರಕೆ ಹೇಗೆ ನಿಜವಾಗಿದೆ, ನೋಡಿ. ಜನರಲ್ಲಿ ಹಣದ ಹೊಳೆ ಹರಿಯುತ್ತಿದೆ. ಬೆಂಗಳೂರು ನಗರದಲ್ಲೇ ಆರಂಕಿ ಸಂಬಳ ಪಡೆಯುವವರ ಸಂಖ್ಯೆ ಆರಂಕಿ ಮೀರಿದೆಯಂತೆ. ಗಮನಿಸಿ ಇದು ಮಾಲೀಕನಿಂದ ಪಗಾರ ಪಡೆಯುವವರ ಸಂಖ್ಯೆ ಮಾತ್ರ. ಇದರಲ್ಲಿ ತಾವೇ ಸಂಬಳಕ್ಕೆ ನೇಮಿಸಿಕೊಳ್ಳುವ ಉದ್ಯೋಗಪತಿಗಳು, ಅಲ್ಪ ಬಂಡವಾಳ-ಭಾರೀ ಲಾಭದ ಕಂಟ್ರಾಕ್ಟರುದಾರರು, ಸೊನ್ನೆ ಬಂಡವಾಳ ಕೋಟಿ ಗಳಿಕೆಯ ರಾಜಕಾರಣಿಗಳು ಸೇರಿಲ್ಲ. ಕೋಲಾರದ ಚಿನ್ನದ ಗಣಿ ಮುಚ್ಚಿದೆ. ಆದರೆ ಚಿನ್ನದ ಅಂಗಡಿಗಳಲ್ಲಿ ಸದಾ ನೂಕುನುಗ್ಗಲು. ಸರಗಳ್ಳರ ಸಂಖ್ಯೆ ಏರುತ್ತಿರುವ ಸೂರರಷ್ಟು ವೇಗದಲ್ಲಿ ಸರ ಕೊಳ್ಳುವವರ ಹಿಂದೆ ಅಗತ್ಯ ವಸ್ತುಗಳು ರೋಟಿ ಕಪಡಾ ಮಕಾನ್. ಈಗ ಗ್ಯಾಸ್, ಟೀವಿ, ಫ್ರಿಜ್ ಮೊಬೈಲ್ ಅಂತಹ ನೂರಾರು ವಸ್ತುಗಳು ಅಗತ್ಯ ಮಾತ್ರವಲ್ಲ, ಅನಿವಾರ್ಯ. ವಾಹನಗಳಲ್ಲಿ ಎಷ್ಟು ಬಗೆಬಗೆಗಳು! ಬೆಳಗಿನಿಂದ ಬೈಗಿನವರೆಗೆ ಎಲ್ಲಾ ರಸ್ತೆಗಳಲ್ಲೂ ಲಕ್ಷುರಿ

ಸೂಪರ್ ಲಕ್ಸುರಿ, ಸೂಪರ್ ಸೂಪರ್ ಲಕ್ಸುರಿ ಕಾರುಗಳ ಮೆರವಣಿಗೆ. ಕನ್ನಡಿಗರೂ ಹೊಳೆಯುತ್ತಿದ್ದಾರೆ.

★★★

ಕರ್ನಾಟಕ ಹೊಳೆಯುತ್ತಿದೆ, ಕನ್ನಡಿಗರು ಹೊಳೆಯುತ್ತಿದ್ದಾರೆ. ಆದರೆ ಕನ್ನಡ? ಸರ್ಕಾರ ತಾನೇ ನಡೆಸುವ ಶಾಲೆಗಳಲ್ಲೂ ಒಂದನೆಯ ತರಗತಿಯಿಂದಲೇ ಇಂಗ್ಲೀಷ್ ಕಲಿಸಲು ನಿರ್ಧರಿಸಿದೆ. ಅನುಕೂಲವಂತರ, ಬುದ್ಧಿವಂತರ ಮಕ್ಕಳು ತಮ್ಮ ಎರಡನೆಯ ಅಥವ ಮೂರನೆಯ ವಯಸ್ಸಿನಲ್ಲಿಯೇ ಇಂಗ್ಲೀಷ್ ಕಲಿಯುತ್ತಿದ್ದರು. ಆದರೆ ಬಡವರು ಓದುವ ಸರ್ಕಾರಿ ಶಾಲೆಯ ಮಕ್ಕಳಿಗೆ ಎಬಿ ಕಲಿಯಲು ಹತ್ತು ವರ್ಷವಾಗಿರಲೇಬೇಕು ಎನ್ನುವ ನಿಯಮ. ಯಾರದೇ ಸರ್ಕಾರವಿದ್ದರೂ ಈ ಬಿರುಕು ಮುಚ್ಚಲೇಬೇಕಾಗಿತ್ತು. ನಮ್ಮ ವಿಚಾರವಂತರಿಗೆ ಇಲ್ಲಿಯವರೆಗೂ ಇಂಗ್ಲೀಷ್ –evil ದುಷ್ಟವಾಗಿತ್ತು. ಆದರೆ ಈಗ ಇದೇ ಜನ ಇಂಗ್ಲೀಷ್ ಸಹಿಸಲೇ ಬೇಕಾದ ದುಷ್ಟ ಎನ್ನುವುದನ್ನು ಒಪ್ಪಿಕೊಳ್ಳುತ್ತಿದ್ದಾರೆ.

★★★

ಕ್ರಿಕೆಟ್ಟಿನಲ್ಲಿ ಆಗಾಗ ವಿಜಯದ ಹೊಸ್ತಿಲಿನಲ್ಲಿದ್ದ ಪಂಗಡ ಜಾರಿ ಬಿದ್ದು ಮೀಸೆ ಮಣ್ಣು ಮಾಡಿಕೊಳ್ಳುತ್ತದೆ. ಸೋಲಿನ ದವಡೆಯಲ್ಲಿದ್ದ ಪಂಗಡದ ಹತ್ತನೆಯ ಅಥವ ಹನ್ನೊಂದನೆಯ ಆಟಗಾರ ಔಟಾಗುವುದೇ ಇಲ್ಲ. ಇಂತಹ ಸಂದರ್ಭಗಳನ್ನು ಕ್ರಿಕೆಟ್ಟಿನ ಮಹದಾನಂದಕರ ಅನಿಶ್ಚತೆ- glorious uncertainities- ಎಂದು ಕರೆಯುತ್ತಿದ್ದರು. ಈಗ ಆನಂದ ಕೊಡುವ ಇಂತಹ ಅನಿಶ್ಚತೆಗಳಿಗಿಂತ ಅಸಹ್ಯ ಹುಟ್ಟಿಸುವ, ಕೋಪ ತರಿಸುವ ಘಟನೆಗಳೇ ಹೆಚ್ಚಾಗಿವೆ. ಜುಟ್ಟು ಹಾರಿಸಿಕೊಂಡು ಓಡಿ ವಿಕೆಟ್ ಉರುಳಿದಾಗ ಅಟ್ಟಹಾಸ ಪಡುತ್ತಿದ್ದ ರಾವಲ್ಪಿಂಡಿ ಎಕ್ಸ್‌ಪ್ರೆಸ್ ಮುಖ ಮುಚ್ಚಿಕೊಂಡು ವಿಮಾನ ಹತ್ತಿದ್ದನ್ನು ನೀವೂ ನೋಡಿರಬೇಕು.

★★★

ಜೇನು ಗೂಡಿಗೆ ಕಲ್ಲು ಹೊಡೆದಂತೆ ಎಂದರೆ ಸುಮ್ಮಸುಮ್ಮನೆ ಗದ್ದಲ ಎಬ್ಬಿಸಿ ಕಷ್ಟ ತಂದುಕೊಳ್ಳುವುದು ಎಂದರ್ಥವಂತೆ. ಆದರೆ ಈಚೆಗೆ ಕುಣಿಗಲ್ ಹತ್ತಿರದ ಹಳ್ಳಿಯ ಒಬ್ಬ ಅತಿ ಜಾಣ ಮಹಿಳೆ ಜೇನು ಗೂಡಿಗೆ ಕಲ್ಲು ಹೊಡೆದು ಭಾರೀ ಜಗಳವನ್ನು ತಪ್ಪಿಸಿದಳಂತೆ! ಎರಡು ಹಳ್ಳಿಯವರ ನಡುವೆ ಒಂದು ಕೆರೆಯ ನೀರಿಗಾಗಿ ಮಾರಾಮಾರಿ. ಕಲ್ಲು ತೂರಾಟ. ಮಧ್ಯೆ ಪ್ರವೇಶಿಸಿದ ಪೊಲೀಸರಿಗೂ ಗಾಯ. ಅಶ್ರುವಾಯು, ಗಾಳಿಯಲ್ಲಿ ಗುಂಡು. ಆಗ ಈ ಮಹಿಳೆಯಿಂದ ಹತ್ತಿರದ ಮರದಮೇಲೆ ಕಟ್ಟಿದ್ದ ಜೇನುಗೂಡಿಗೆ ಕಲ್ಲು. ಪೊಲೀಸಿನವರು, ನಾಗರೀಕರು ಆ ಪಕ್ಷ, ಈಪಕ್ಷ ಎನ್ನುವ ಭೇಧಭಾವವಿಲ್ಲದೇ ಜೇನುಗಳ ದಾಳಿ. ಕ್ಷಣದಲ್ಲಿಯೇ ಪರಿಸ್ಥಿತಿ ಶಾಂತ!

★★★

ತುಂತುರು

- Teach English, not in English
- ಒಂದು ಮೊಸಳೆ ಇನ್ನೊಂದು ಮೊಸಳೆಗೆ: ನನಗೆ ಪುನರ್ಜನ್ಮದಲ್ಲಿ ನಂಬಿಕೆ ಇದೆ. ನಾನು ಮುಂದಿನ ಜನ್ಮದಲ್ಲಿ ಒಂದು ಜಂಬದ ಚೀಲವಾಗಿ ಹುಟ್ಟುತ್ತೇನೆ.
- ನೈಟ್ late ಆದರೆ ಮಾರ್ನಿಂಗ್ early ಹೇಗೆ ಆಗುತ್ತದೆ?
- ಮೊಬೈಲ್‌ನಲ್ಲಿ ಕರೆನ್ಸಿ ಇಲ್ಲದಿದ್ದರೆ ಮನಸ್ಸು ಶೂನ್ಯ ಆಗುತ್ತದೆ.
- ಕಾಲ ಎಲ್ಲರನ್ನೂ ಗುಜರಿಗೆ ತಳ್ಳುತ್ತದೆ.
- ನಿನಗೆ ತುಳು ಅರ್ಥವಾಗದಿದ್ದರೆ ನಾನು ತುಳಿವಿನಲ್ಲಿ ಮಾತನಾಡಬಲ್ಲೆ.
- ಜಾಗ: ಹಳ್ಳಿಗಳ ಕಡೆ ಎಕರೆಗಳಲ್ಲಿ, ಪಟ್ಟಣಗಳಲ್ಲಿ ಸೆಂಟ್ಸ್‌ಗಳಲ್ಲಿ, ನಗರಗಳಲ್ಲಿ ಅಡಿಗಳಲ್ಲಿ, ದಿನಪತ್ರಿಕೆಗಳಲ್ಲಿ ಸೆಂಟಿಮೀಟರ್‌ಗಳಲ್ಲಿ ಅಳೆಯಲಾಗುತ್ತದೆ.
- "Card'iology: ವಿಸಿಟಿಂಗ್ ಕಾರ್ಡ್‌ಗಳಿಗೆ ಸಂಬಂಧಿಸಿದ್ದು?
- ಖಾನೆವಾಲೆ ದಾಂತ್ ಔರ್ ದಿಖಾನೆವಾಲೆ ದಾಂತ್ ಅಲಗ್ ಹೈ
- ಕೃಷ್ಣ ಏಕೆ ಸೀರೆ ಕದಿಯುತ್ತಿದ್ದ?
  - ವಸ್ತ್ರಾಪಹರಣ ಸಮಯದಲ್ಲಿ ದ್ರೌಪದಿಗೆ ಕೊಡಲು.
  - ಹಾಗಿದ್ದರೆ ಗೋಪಿಯರ ಸ್ಥಿತಿ ಗತಿ ಏನಾಯಿತು?
- ಮುಷರ್ರಫ್ ಅವರ ಪುಸ್ತಕ In the line of fire
  - ಅತ್ಯುತ್ತಮ ಜೀವನ ಚರಿತ್ರೆ - ಪಾಕಿಸ್ತಾನದಲ್ಲಿ
  - ಗಾಬರಿ ಮೂಡಿಸುವ ಸಾಹಿತ್ಯ - ಅಮೆರಿಕದಲ್ಲಿ
  - ಅತ್ಯುತ್ತಮ ಕಾದಂಬರಿ - ಭಾರತದಲ್ಲಿ
- ನಿಮ್ಮ ವಿವಾಹ ಸಿದ್ಧತೆ ನಡೆಯುತ್ತಿದ್ದರೆ ಬಾಳ ಸಂಗಾತಿಯ ಖರೀದಿ ಖಯಾಲಿ ಎಷ್ಟಿದೆ ಎಂಬುದನ್ನು ಪರೀಕ್ಷಿಸಿ.

– ದಂನಾಕ

ಹಕ್ಕಿ ಗೂಡು...

– ಎಚ್. ಗೋಪಾಲಕೃಷ್ಣ

ಸರ್ಕಾರದಲ್ಲಿ ಹಿರಿಯ ಅಧಿಕಾರದಲ್ಲಿ ಇರುವಾತ ಅವರು. ಅದಕ್ಕೆ ತಕ್ಕ ಹಾಗೆ ಜರ್ಬು, ಜಬರ್ದಸ್ತು ಮತ್ತು ತಾನು ಹೇಳಿದ್ದು ಆಗಲೇಬೇಕು ಮೊದಲಾದ ಹಿರಿಯ ಅಧಿಕಾರಿಗಳಿಗೆ ಇರುವಂಥಹ ಸಕಲ ಗುಣಗಳೂ ಈತನಲ್ಲಿ ಕೊಂಚ ಹೆಚ್ಚಾಗಿಯೇ ಇವೆ. ಇದರ ಜತೆ ಜತೆಗೆ ದೇಶ ಸುತ್ತುವ ಹವ್ಯಾಸ ಬೇರೆ ಇಟ್ಟುಕೊಂಡಿದಾರೆ. ದೇಶ ಸುತ್ತಬೇಕಾದರೆ ಅವರ ಕಣ್ಣಿಗೆ ಬೀಳುವ ಅಪರೂಪದ ವಸ್ತುಗಳನ್ನ ತರುತ್ತಾರೆ, ಮನೆಯ ಒಂದು ಕಡೆ ಅದನ್ನ ಜೋಪಾನವಾಗಿ ಜೋಡಿಸುತ್ತಾರೆ. ಬಂದ ನಂಟರಿಗೆ ಇಷ್ಟರಿಗೆ ಗೆಳೆಯರಿಗೆ ಬಂಧುಗಳಿಗೆ ಸಹೋದ್ಯೋಗಿಗಳಿಗೆ ಹೊಸದಾಗಿ ತಂದ ವಸ್ತುವನ್ನು ತೋರಿಸಿ ತಾವು ಅದನ್ನು ಹೇಗೆ ಎಷ್ಟು ಚಾಣಾಕ್ಷತೆ ಉಪಯೋಗಿಸಿ ಪಡೆದುಕೊಂಡರು, ಬೇರೆಕಡೆ ಅದಕ್ಕೆ ಎಷ್ಟು ಬೆಲೆ ಆಗಬಹುದು-ಇವರು ಅದನ್ನ ಹೇಗೆ ಚೌಕಾಸಿ ಮಾಡಿ ರಾಕ್ ದಿ ಬಾಟಂ ಬೆಲೆಗೆ ಪಡೆದರು ಈ ವಿವರಗಳನ್ನೆಲ್ಲಾ ಹೇಳಿ ವಿವರ ಕೇಳುತ್ತಾ ಎದುರಿಗೆ ಕುಳಿತವರು ತಮಗೆ ಇದನ್ನು ಪಡೆಯುವ ಭಾಗ್ಯ ಸಿಗಲಿಲ್ಲವೇ ಅಂತ ಕೊರುಗುವುದನ್ನು ನೋಡಬೇಕಾದರೆ ಒಳಗೊಳಗೇ ಒಂದು ರೀತಿ ಆನಂದ, ಸಂತೋಷ, ಖುಷಿ ಇವನ್ನೆಲ್ಲಾ ಪಟ್ಟುಕೊಂಡು ಹಿಂಸಾನಂದ ಅನುಭವಿಸುತ್ತಾರೆ! ಹಲವಾರು ಬಾರಿ ಹಲವಾರು ದೇಶಗಳನ್ನು ಸುತ್ತಿ ಬಂದಿರುವ ಅನುಭವವಿರುವುದರಿಂದ ಯಾರಿಗೆ ಯಾವ ರೀತಿಯಲ್ಲಿ ಗಾಳ ಹಾಕಿ ಹಿಡಿಯಬೇಕು ಎಂಬುವ ಸೂಕ್ಷ್ಮ ಸಹಾ ಇವರಿಗೆ ಕರತಲಾಮಲಕ. ಹೋದ ವರ್ಷ ಇವರು ತಮ್ಮ ಮಲೆನಾಡಿನ ಹತ್ತಿರದ ಹಳ್ಳಿಯೊಂದಕ್ಕೆ ಪ್ರವಾಸಕ್ಕೆ ಅಂತ ಹೋದರು. ಹತ್ತಿರದ ಕಾಡಿನಲ್ಲಿ ಮರಗಿಡ ನೋಡುತ್ತಾ ಸಾಗುತ್ತಿದ್ದರು. ಹಿಂದೆ ಕಾಡನ್ನು ನೋಡಿದವರಲ್ಲ, ಅದರಿಂದ ಈಗಿನ ಕಾಡೇ ಅವರನ್ನು ಆಕರ್ಷಿಸಿತು. ಹೀಗೆ ಕಾಡಿನ ವನಸಿರಿಯ ಆನಂದವನ್ನು ಅನುಭವಿಸುತ್ತಾ ಸಾಗುತ್ತಿರಬೇಕಾದರೆ ಅವರಿಗೆ ಹತ್ತಿರದ ಮೇಲಿನ ಒಂದು ವಸ್ತು ಆಕರ್ಷಿಸಬೇಕೇ, ಆಕರ್ಷಿಸಿ ಸೆಳೆಯಬೇಕೇ? ಜತೆಯಲ್ಲಿದ್ದ ಹಳ್ಳಿಯ ಹುಡುಗನನ್ನು ಹತ್ತಿರಕ್ಕೆ ಕರೆದರು.

ನೋಡು, ಅಲ್ಲಿ ಮೂರನೇ ಕೊಂಬೆ ಹತ್ತಿರ ಅದೇನೋ ಇದೆಯಲ್ಲಾ? ಅದೇನು? ಅಂತ ಕೇಳಿದರು. ಹುಡುಗ ತಲೆಯೆತ್ತಿ ನೋಡಿದ. ಸಾರ್ ಅದು ಹಕ್ಕಿ ಗೂಡು ಕಟ್ಟಿಕೊಂಡಿರ್ತೈತೆ. ಅದು ಹಕ್ಕಿ ಇರಾ ಗೂಡು.... ಅಂದ.

ಅದರೊಳಗೆ ಈಗ ಹಕ್ಕಿ ಇರುತ್ತಾ...?

ಇಲ್ಲಾ ಸಾರ್ ಉಳ ಉಪ್ಪಡಿ ಉಡುಕ್ಕೊಂಡು ಓಗಿರ್ತೈತೆ... ಚಂಜೀಮ್ಯಾಗೆ ಗೂಡಿಗೆ ಬರ್ತದೆ...

ಹಾಗಿದ್ರೆ, ಒಂದು ಕೆಲ್ಸ ಮಾಡ್ತೀಯಾ...

ಏಸ್ ಸಾರ್... ಅಂದ ಹುಡುಗ.

ಆ ಗೂಡು ಎಷ್ಟು ಚೆಂದಾಗಿದೆ ಅಲ್ಲವಾ? ಅದನ್ನ ನಂಗೆ ತಂದು ಕೊಡ್ತೀಯಾ...?

ಹುಡುಗ ಮರ ನೋಡಿದ, ಇವರ ಮುಖ ನೋಡಿದ... ತಲೆ ಕೆರೀತಾ ನಿಂತ.

ಹುಡುಗ ಕೊಂಚ ದುಡ್ಡು ಕೊಟ್ಟರೆ ಗೂಡು ಕಿತ್ತು ತರ್ತಾನೆ. ಪೇಟೆಯವನು ನನಗೆ ಮರ ಹತ್ತೋಕ್ಕೆ ಬರುಲ್ಲ ಅಂತ ಅವನಿಗೆ ಗೊತ್ತು. ಅದರಿಂದ ಮನಸ್ಸಿನಲ್ಲೇ ದುಡ್ಡು ಎಷ್ಟು ಪೀಕಬಹುದು ಅಂತ ಲೆಕ್ಕ ಹಾಕ್ತಾ ಇರಬಹುದು ಅಂತ ಆಫೀಸರಿಗೆ ಅನಿಸಿತು.

ಮರೀ ಕಾಸು ಕೊಡ್ತೀನಿ. ಕಿತ್ಕೊಂಡು ಬಾ ಗೂಡ್ನಾ... ಅಂದರು.

ಹುಡುಗ ಏನೂ ಉತ್ತರ ಕೊಡದೆ ಮತ್ತೆ ಮರಾನ, ಇವರನ್ನ ಮರದ ಎತ್ತರವನ್ನ ನೋಡುತ್ತಾ ನಿಂತ. ಕಣ್ಣಿನಲ್ಲಿ ದುಡ್ಡು ಸಿಕ್ಕರೆ ಅದರಿಂದ ಅದೇನೇನು ಮಾಡಬಹುದು ಎಂಬ ಲೆಕ್ಕಾಚಾರ ಆಫೀಸರಿಗೆ ಕಾಣಿಸಿತು.

ಜೇಬಿನಿಂದ ಪರ್ಸು ತೆಗೆದರು. ಗರಿ ಗರಿಯಾದ ಹತ್ತು ರೂಪಾಯಿನ ನೋಟು ಆಚೆ ತೆಗೆದರು.

ನೋಡು ಹತ್ತು ರೂಪಾಯಿ ಇದೆ. ಗೂಡು ತಂದರೆ ನಿನ್ ನಿನಗೇನೇ ಇದು... ಅಂದರು!

ಹುಡುಗ ಆಸೆ ಕಣ್ಣಿನಿಂದ ಇವರ ಕೈಲಿ ಹಿಡಿದಿದ್ದ ರೂಪಾಯಿನ ನೋಟು ನೋಡಿದ. ಒಂದು ಸೆಕೆಂಡು ತಲೆ ತಗ್ಗಿಸಿದ. ಮರು ನಿಮಿಷವೇ ಕೈನಲ್ಲಿದ್ದ ಕೋಲನ್ನ ಪಕ್ಕಕ್ಕೆ ಇಟ್ಟ, ಉಟ್ಟಿದ್ದ ಟವಲ್ಲನ್ನ ಬಿಚ್ಚಿದ, ತಲೇಗೆ ಟವಲ್ಲು ಕಟ್ಟಿದ, ಸರಸರ ಮರ ಏರಿದ. ಆಫೀಸರು ಪರವಾಗಿಲ್ಲ ಹುಡುಗನಿಗೆ ದುಡ್ಡಿನ ಆಸೆ ತೋರಿಸಿ ಗೂಡನ್ನ ಕಿತ್ತುಕೊಂಡು ಬರೋಹಾಗೆ ಮಾಡಿದೆ. ಮನೆಯಲ್ಲಿ ಗೂಡನ್ನ ಯಾವ ಜಾಗದಲ್ಲಿ ಇಟ್ಟರೆ ಚೆನ್ನಾಗಿ ಕಾಣುತ್ತೆ, ಇದನ್ನು ತಂದ ಬಗೆಯನ್ನ ಗೆಳೆಯರಿಗೆ ಯಾವ ರೀತಿ ರಂಗು ರಂಗು ಬೆರೆಸಿ ಹೇಳಬಹುದು, ಯಾರಿಗೆ ಎಷ್ಟು ಹೊಟ್ಟೆ ಉರಿಸಬಹುದು, ಯಾರು ತಮಗೂ ಈ ರೀತಿಯ ಗೂಡು ಬೇಕು ತಂದುಕೊಡಿ ಅಂತ ಕೇಳಬಹುದು... ಅಂತ ಮನಸ್ಸಿನಲ್ಲಿಯೇ ಮಂಡಿಗೆ ಉಣ್ಣುತ್ತಾ ಇದಾರೆ.

ಹುಡುಗ ಮರ ಇಳಿದ, ಬಂದು ಇವರೆದುರು ನಿಂತ. ಅವನ ಕೈಯಲ್ಲಿ ಗೂಡಿರಲಿ, ಏನೂ ಇಲ್ಲ.

ಯಾಕೋ ಮರೀ ಗೂಡು ತರಲಿಲ್ಲವೇ...?

ಹುಡುಗ ಇಲ್ಲ ಅಂತ ತಲೆಯಾಡಿಸಿದ.

ಹತ್ತು ರೂಪಾಯಿ ಕೊಡ್ತೀನಿ ಅಂದೆನಲ್ಲೋ? ಹತ್ತು ರೂಪಾಯಿ ಸಾಲದಾ? ಇಪ್ಪತ್ತು ಕೊಡಲಾ?

ಬೇಡಾ ಸಾರ್... ಅಂದ ಹುಡುಗ!

ಯಾಕಪ್ಪಾ...?

ಅಂತ ಆಫೀಸರು ರಮಿಸಿ ಕೇಳಿದರು.

ಸಾರ್. ಗೂಡಿನಲ್ಲಿ ಚಿಕ್ಕ ಮರಿಗಳು ಇವೆ, ಅವಕ್ಕೆ ಇನ್ನೂ ರೆಕ್ಕೆ ಪುಕ್ಕ ಬಲಿತಿಲ್ಲ. ನೀವು ಕಾಸು ಕೊಡ್ತೀರಿ ಅಂತ ನಾನು ಗೂಡು ಕಿತ್ತುಕೊಂಡು ಬಂದು ಕೊಟ್ಟರೆ ಚಂಜೀನಾಗ ಅದರ ಅಮ್ಮ ಬಂದು •ಮರಿಗೋಳು ಏನಾದ್ವೋ ಅಂತ ಪರದಾಡ್ತೈತೆ. ನಿಮ್ಮ ಕಾಸು ಬೇಡ್ರೀ. ಅದರಮ್ಮ ಬಂದು ಪರದಾಡೋದು ನೆನಸ್ಕಂಡ್ರೆ ನನ್ಗೆ ಕಣ್ಣಲ್ಲಿ ರಕತ ಬಂದಾಂಗೆ ಆಗ್ತೈತೆ... ಅಂದ.

ನಮ್ಮ ಸಿಟಿಯ ಆಫೀಸರು ಈ ಪ್ರಸಂಗ ಆದ ನಂತರ ಈ ಥರಹದ ವಸ್ತುವನ್ನ ತಮ್ಮ ಷೋಕೇಸಿನಲ್ಲಿ ಇರಿಸುವ ಮೊದಲು ಸಾವಿರ ಸಲ ಯೋಚಿಸುತ್ತಾರೆ!



ನಿನ್ನ ನೋಡಿದ ಮೇಲೆ ಓದ ಜೀವ ಮತ್ತೆ ಬಂದಂಗಾತು.... ಬಲೇ ಚೆನ್ನಾಗಿದಿಯಾ... ಏನ್ನ್ ನಿನ್ನ ಹೆಸರು...

ಉಕ್ತಿ- ಚಾಟೋಕ್ತಿ

- ಎನ್. ರಾಮನಾಥ್

ವಾರ್ತಾ ಮತ್ತು ಪ್ರಚಾರ ಸಚಿವರಾಗಿ ಅಂಬರೀಷ್ ಆಯ್ಕೆ - ಸುದ್ದಿ

ಯೋಗ್ಯತೆಯು ಬೇಕಿಲ್ಲ ವಿದ್ಯೆ ಮೊದಲೇ ಬೇಡ ಹೈಕಮಾಂಡ್ ಹೇಳಿದವನಿಲ್ಲಿ ಸಚಿವ
ಅಂಬರೀಷಗೆ ವಾರ್ತೆ ಖಾತೆ ಎಂಬೀ ವಾರ್ತೆ ಜಾತಿಗರಿಗಿನಿತಹುದು ಇತರರ್ಗಲ್ಲ

★★★

ಜೋಕೆ: ಮೊಬೈಲ್ ನಿಂದ ಪೌರುಷಕ್ಕೆ ಧಕ್ಕೆ - ಸುದ್ದಿ

ಸುದ್ದಿ ಕೇಳಿದ ಹಲವು ಗಂಡುಬೀರಿಯರೆಲ್ಲ ಹೌಹಾರಿ ತೊರೆದಿಹರು cellಉ phoneಉ
jokeಏ ಇಂತಹ ವಿಷಯ ಸಾಧಾರವಲ್ಲವದು ಗಮನವಾ ಸೆಳೆಯಲ್ಕೆ ಹಲ ಜನರ ಸಂಚು

★★★

ಒಳ ಮೀಸಲಿಗೆ ಒಪ್ಪಿಗೆ - ಗೌಡ

ಗೌಡರ ಕಾರ್ಯದ ವೈಖರಿ ಎಂದಿಗು ಇಂತಹ ರೀತಿಯದೆ
ಒಳ ಸಂಬಂಧಿತ ಆವುದೆ ಕೆಲಸಕು ಸಮ್ಮತಿ ಅವರದಿದೆ

★★★

ಚಿಂತನೆಗೆ ಹಚ್ಚುವ ದೃಶ್ಯಮಾಧ್ಯಮ ಬೇಕು - ಗಿರೀಶ್ ಕಾಸರವಳ್ಳಿ

ತಿರುಗಿಸಿ ತಕ್ಷಣ ಚಾನಲ್ಗಳನು Astha, Q tvಯನು ವೀಕ್ಷಿಸಿರಿ
ಚಿಂತನೆ ದೂರವು ನಮ್ಮ ಮಾಧ್ಯಮಕೆ ಅದರ ಚಿಂತೆಯ ಬಿಟ್ಟುಬಿಡಿ

★★★

ಸೊರಗುತ್ತಿದೆ ಸಿನಿಮಾ - ಸಮೀಕ್ಷೆ

ಕಥೆ slimಉ hero, heroineದ್ರಮ್ಮು, ಹಾಡುಗಳು ಬರೀ ಧಂಢಮ್ಮು
ಹೀಗಿರಲು ನೋಡುಗರಿರದೆ no incomeಉ ಈಗಾದರೂ ಎಚ್ಚೆತ್ತರುತ್ತಮ filmಥಮ್ಮು!

★★★

ಕಿತ್ತೂರು ಉತ್ಸವಕ್ಕೆ ಒಂದು ಕೋಟಿ ರೂ ಮೀಸಲು - ಎಡಿಯೂರಪ್ಪ

ಕಿತ್ತೂರು ಉತ್ಸವದಿ ಏನೇನಂ ಕಿತ್ತು ತೂರುವರೋ, ಕಿತ್ತು ಬೇರೂರುವರೋ
ಕಿತ್ತುವವರಾರೆಂದು, ಎನಿತೆಂದು ಈಗಲೇ ನಿರ್ಧಾರ ಮಾಡಿಪರೊ ಏನೋ

★★★

ರೇಸ್‌ಕೋರ್ಸ್ ಸ್ಥಳಾಂತರಕ್ಕೆ ಒತ್ತಾಯ - ಸುದ್ದಿ

ಉಪಯೋಗವಾಗದು ರೇಸ್‌ಕೋರ್ಸ್ ಸ್ಥಳದ ಬದಲಾವಣೆಯಿಂದ
ರೇಸಿಗರಶ್ವದ ಬಾಲದ ಹಿಂದೆಯೆ ಕದಲರು ಎಂದಿಗು ಅಲ್ಲಿಂದ

★★★

ಪಾಟ್ನಾದಲ್ಲಿ ಲಾಲೂ. ರಾಬ್ರಿ ಹೆಸರಿನ ಪಟಾಕಿಗಳ ಮಾರಾಟ - ಸುದ್ದಿ

ಹೆಸರು ಮಾತ್ರವೇ ಹೊಂದಿರೆ ಇವುಗಳು ಅಪಾಯವಿಲ್ಲವು ಜನಗಳಿಗೆ
ಗುಣವ ಹೊಂದಿರೆ ಹಚ್ಚುವವನನೆ ಮೆದ್ದೀತೆಂಬುದೆ ಭಯವೆಮಗೆ

★★★

ಆಸ್ತಿಗಾಗಿ ಮಠಗಳ ಪೈಪೋಟಿ - ನಿಡುಮಾಮಿಡಿ ಶ್ರೀಗಳು

ಮೋಹ ತೊರೆದು ಮೋಕ್ಷ ಕೋರ್‍ವ ಭಕುತಗೇಕೆ ಆಸ್ತಿಯು
ಆಸ್ತಿ ಮಾಡಲಿಚ್ಛಿಸಿದರೆ ಭಕುತಿ ಬರಿದೆ ತೋರ್ಕೆಯು

★★★

ಸಚಿವ ಈಶ್ವರಪ್ಪನನ್ನು ದಬಾಯಿಸಿದ ಶಾಸಕ - ಸುದ್ದಿ

ನೋಡಿಹೆವು ಆಗಾಗ್ಗೆ ಪಾಮರಿನ್ ನಾಯಿಗಳು ಬ್ಲಡ್‌ಹೌಂಡ್‌ಗೆ ಬೊಗಳುವಾ
ಸೋಜಿಗದ ಪರಿಯ
ಪ್ರಾಣಿಗಳೆ ತುಂಬಿರುವ ರಾಜಕೀಯದೆ ಇಂತಹ ಪ್ರಕರಣವು ನಡೆಯುತ್ತ ಇರುವುದೇ
ಚಂದ

★★★

ಐಟಿ ಬಿಟಿಯಲ್ಲಿ
ಜಾಬು ಸಂತೃಪ್ತಿ
ಇಲ್ಲದಿದ್ದರೂ
ಜೇಬು ಸಂತೃಪ್ತಿ ಇದೆ
ಹೇರಳವಾಗಿ

–ಸುಕೇಶವ

Mailing Date:
5th of every month

RNI-KAR KAN / 2005 / 15457

Printed by: V.R. NATH for the Publisher KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore - 560 003.
Printed at: RAVI GRAPHICS, 60/2, 2nd Main Road, Industrial Town, Rajajinagar, Bangalore - 560 044. PH : 2330 5999.
Editor: M. SHIVAKUMAR